ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೧೫೮**

**ಪಟ್ಟಿ – ೦೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತಾರನೇ ಅಧಿವೇಶನ

**ಗುರುವಾರ, ದಿನಾಂಕ : ೧೧ನೇ ಡಿಸೆಂಬರ್, ೨೦೧೪**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ರಸ್ತೆ ಅಗಲೀಕರಣ ಕಾಮಗಾರಿ ಸ್ಥಗಿತ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೫೯ (೪೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಲಹಂಕ ಬಿ.ಬಿ.ಎಂ.ಪಿ. ವಲಯದ ಜಕ್ಕೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ವೆಂಕಟೇಶ್ವರ ಬಡಾವಣೆಯಿಂದ ಕೋಗಿಲು ರಸ್ತೆಯವರೆಗಿನ ೬ ಕಿ.ಮೀ. ಉದ್ದದ ರಸ್ತೆ ಅಗಲೀಕರಣ ಕಾಮಗಾರಿಯು ಪ್ರಾರಂಭವಾಗಿ ಅರ್ಧಕ್ಕೆ ನಿಂತಿರುವುದು ನಿಜವೇ ; ಹಾಗಿದ್ದಲ್ಲಿ ಕಾರಣವೇನು ;

(ಆ) ನಿಂತಿರುವ ಕಾಮಗಾರಿಯಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಎಂದಿನಿಂದ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು (ವಿವರಣೆ ನೀಡುವುದು) ?

## ಗುಂಜಾ ನರಸಿಂಹಸ್ವಾಮಿ ದೇವಾಲಯದ ಅಭಿವೃದ್ಧಿ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೬೦ (೩೮೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ, ಕಪಿಲಾ, ಸ್ಪಟಿಕಾ ಸರೋವರಗಳ ತ್ರಿವೇಣಿ ಸಂಗಮದ ತಟದಲ್ಲಿರುವ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಗೊಂಡಿರುವ ಗುಂಜಾ



ನರಸಿಂಹಸ್ವಾಮಿ ದೇವಾಲಯದಲ್ಲಿ ಮೂಲಭೂತ ಸೌಕರ್ಯಗಳ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪ್ರತಿನಿತ್ಯ ನೂರಾರು ಭಕ್ತರು ಕೊಳಚೆ ನೀರಿನಲ್ಲಿ ಸ್ನಾನ ಮಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಇ) ಈ ದೇವಾಲಯದ ಅಭಿವೃದ್ಧಿಗೆ ಕಳೆದ ೩ ವರ್ಷಗಳ ಆಯವ್ಯಯದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ; ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚಮಾಡಲಾದ ಹಣವೆಷ್ಟು (ಸಂಪೂರ್ಣ ವಿವರ ನೀಡುವುದು) ;

(ಈ) ಸದರಿ ದೇವಸ್ಥಾನದ ಆವರಣದಲ್ಲಿ 'ಮರಳು ಮಾಫಿಯಾ' ನಡೆಯುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ಈ ರೀತಿ ಅಕ್ರಮ ಮರಳು ತೆಗೆದಿರುವ ಗುಂಡಿಗಳಿಗೆ ಬಿದ್ದು ಮೃತಪಟ್ಟ ಭಕ್ತರ ಸಂಖ್ಯೆ ಎಷ್ಟು (ವಿವರವಾದ ಮಾಹಿತಿಯನ್ನು ನೀಡುವುದು) ?

## ಬಿ.ಬಿ.ಎಂ.ಪಿ.ಗೆ ಖಾಸಗಿ ಕಂಪನಿಗಳಿಂದ ಆಸ್ತಿ ತೆರಿಗೆ ಪಾವತಿ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೬೧ (೩೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸದ ಪ್ರತಿಷ್ಠಿತ ಖಾಸಗಿ ಕಂಪನಿಗಳ ವಿವರ ನೀಡುವುದು ;

(ಆ) ಈ ಕುರಿತು ಸದರಿ ಕಂಪನಿಗಳಿಂದ ತೆರಿಗೆ ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರವಾದ ಮಾಹಿತಿ ನೀಡುವುದು) ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎಷ್ಟು ಬಾಕಿ ತೆರಿಗೆ ಬರಬೇಕಾಗಿರುತ್ತದೆ (ವಿವರವಾದ ಮಾಹಿತಿ ನೀಡುವುದು) ?

## ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೬೨ (೩೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು (ವಿವರವಾದ ಮಾಹಿತಿ ನೀಡುವುದು) ;

(ಆ) ಒತ್ತುವರಿಯಾಗಿರುವ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕೈಗೊಂಡ ಕ್ರಮಗಳೇನು (ವಿವರವಾದ ಮಾಹಿತಿ ನೀಡುವುದು) ;

(ಇ) ಈ ರೀತಿ ಒತ್ತುವರಿ ಮಾಡಿರುವವರ ಸಂಪೂರ್ಣ ವಿವರ ಒದಗಿಸುವುದು ಹಾಗೂ ಅವರ ವಿರುದ್ಧ ಕೈಗೊಂಡಿರುವ ಕಾನೂನಿನ ಕ್ರಮಗಳೇನು (ವಿವರವಾದ ಮಾಹಿತಿ ನೀಡುವುದು) ?



## 'ಕಿಸ್ಸಿಂಗ್ ಡೇ' ಕಾರ್ಯಕ್ರಮ ಆಯೋಜನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೬೩ (೨೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇರಳದಲ್ಲಿ ಆರಂಭವಾದ 'ಕಿಸ್ ಆಫ್ ಲವ್' ಕಾರ್ಯಕ್ರಮದಂತೆ ಬೆಂಗಳೂರಿನಲ್ಲೂ 'ಕಿಸ್ಸಿಂಗ್ ಡೇ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಂತಹ ಕಾರ್ಯಕ್ರಮಗಳ ಆಯೋಜನೆಗೆ ಅವಕಾಶ ನೀಡುವುದರಿಂದ ನಾಡಿನ ಸಂಸ್ಕೃತಿಗೆ ಅವಮಾನ ಮಾಡಿದಂತೆ ಆಗುವುದಿಲ್ಲವೇ ;

(ಇ) ಇಂತಹ ಕಾರ್ಯಕ್ರಮಗಳನ್ನು ನಿಷೇಧಿಸಲು ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ಕೈಗೊಂಡಿರುವ ಕ್ರಮಗಳೇನು ;

(ಈ) ಹಾಗಿದ್ದಲ್ಲಿ, ಈ ಕಾರ್ಯಕ್ರಮ ಆಯೋಜಿಸುವವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವುದೇ ?

## ಕುಡಿಯುವ ನೀರಿನ ಯೋಜನೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೬೪ (೨೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಉಡುಪಿ ನಗರಸಭೆ, ಕುಂದಾಪುರ, ಕಾರ್ಕಳ ಪುರಸಭೆ ಹಾಗೂ

ಸಾಲಿಗ್ರಾಮ ಪಟ್ಟಣ ಪಂಚಾಯತುಗಳಿಗೆ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವಾಗ ಮುಂದಿನ ಎಷ್ಟು ವರ್ಷಗಳ ಚಿಂತನೆಯೊಂದಿಗೆ ಯೋಜನೆ ಸಿದ್ಧಪಡಿಸಲಾಗಿದೆ ಮತ್ತು ಈ ಯೋಜನೆಗಳಿಗೆ ತಗಲುವ ಒಟ್ಟು ಮೊತ್ತವೆಷ್ಟು ; ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ; ಈ ಯೋಜನೆಗಳಿಗೆ ಗುರುತಿಸಲಾದ ಜಲಮೂಲ ಯಾವುದು ?

## ಮಾದಕ ದ್ರವ್ಯಗಳ ಮಾರಾಟ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೬೫ (೨೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಮಾದಕ ದ್ರವ್ಯಗಳಾದ ಗಾಂಜಾ, ಆಫೀಮು, ಚರಸ್, ಬ್ರೌನ್ ಶುಗರ್, ಕೋಕೇನ್, ಹೆರಾಯಿನ್ ಮುಂತಾದವುಗಳು ವ್ಯಾಪಕವಾಗಿ ಕಾಲೇಜು ಪ್ರದೇಶಗಳಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು ಮತ್ತು ಇವುಗಳ ಮೇಲೆ ಕೈಗೊಳ್ಳಲಾದ ಕ್ರಮಗಳೇನು (ಠಾಣಾವಾರು, ಪ್ರಕರಣವಾರು ವಿವರ ನೀಡುವುದು) ;

(ಆ) ಈ ಪ್ರಕರಣಗಳನ್ನು ಸ್ಥಳೀಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಂದ ಪತ್ತೆ ಹಚ್ಚಲು ಸಾಧ್ಯವಾಗದಿದ್ದಲ್ಲಿ ರಾಜ್ಯ ನಿಯಂತ್ರಿತ ವಿಶೇಷ ತನಿಖಾದಳವನ್ನು ವೃತ್ತಕ್ಕೊಂದರಂತೆ ನೇಮಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ?



## ಪಶು ಆಹಾರ ಬೇಡಿಕೆ ಹಾಗೂ ಪೂರೈಕೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೬೬ (೨೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶು ಆಹಾರದ ಬೇಡಿಕೆಯ ಪ್ರಮಾಣವೆಷ್ಟು ; ಕೊರತೆ ಇರುವ ಪಶು ಆಹಾರದ ಪ್ರಮಾಣವೆಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಜಿಲ್ಲಾವಾರು ವಿವರ ನೀಡುವುದು) ;

(ಆ) ಸರ್ಕಾರ, ಸಹಕಾರಿ ಹಾಗೂ ಖಾಸಗಿ ಪಶು ಆಹಾರ ಉತ್ಪಾದನಾ ಘಟಕದಿಂದ ಉತ್ಪಾದನೆಯಾಗುವ ಪಶು ಆಹಾರದ ಪ್ರಮಾಣವೆಷ್ಟು (ಜಿಲ್ಲಾವಾರು, ಘಟಕವಾರು ಪ್ರತ್ಯೇಕ ವಿವರ ನೀಡುವುದು) ;

(ಇ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಬೆಳಂಜೆ ಗ್ರಾಮದಲ್ಲಿ ಪಶು ಆಹಾರ ಉತ್ಪಾದನಾ ಘಟಕ ಸ್ಥಾಪನೆಗಾಗಿ ಸ್ಥಳ ಕಾಯ್ದಿರಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇಲಾಖೆ ತೆಗೆದುಕೊಳ್ಳುವ ತುರ್ತು ಕ್ರಮಗಳೇನು ; ಗಮನಕ್ಕೆ ಬಾರದಿದ್ದಲ್ಲಿ, ಇನ್ನಾದರೂ ಗಮನ ಹರಿಸಲಾಗುವುದೇ ?

## ಅಕ್ರಮ ಗಣಿಗಾರಿಕೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೬೭ (೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಕೆಂಪಕಲ್ಲು, ಶಿಲೆಕಲ್ಲು, ಆವೆಮಣ್ಣು ಮತ್ತು ಮರಳುಗಾರಿಕೆ ಮುಂತಾದ ಗಣಿಗಾರಿಕೆಗಳಿಂದ ಬಹಳಷ್ಟು ಮಾರಾಣಾಂತಿಕ ಹೊಂಡಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಗಣಿಗಾರಿಕೆಯನ್ನು ನಿಯಂತ್ರಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕೇವಲ ನಾಲ್ಕೈದು ಅಧಿಕಾರಿಗಳಿಂದ ಸಾಧ್ಯವೇ ;

(ಇ) ಇಂತಹ ಗಣಿಗಾರಿಕೆಯನ್ನು ನಿಯಂತ್ರಿಸಲು ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳ ಸಹಭಾಗಿತ್ವವನ್ನು ಬಳಸಿಕೊಳ್ಳಲಾಗುವುದೇ ;

(ಈ) ಜಿಲ್ಲೆಯಲ್ಲಿ ಗಣಿಗಾರಿಕೆಗಳಿಂದಾದ ಹೊಂಡಗಳನ್ನು ಅಕ್ರಮ ಗಣಿಗಾರಿಕೆ ನಡೆಸಿದವರಿಂದ ಅಥವಾ ಅಕ್ರಮ ಮಾಡಲು ಸಹಕರಿಸಿದ ಇಲಾಖಾಧಿಕಾರಿಗಳಿಂದ ಮುಚ್ಚಿಸುವ ಯೋಜನೆ ಸರ್ಕಾರದ ಚಿಂತನೆಯಲ್ಲಿದೆಯೇ ; ಅಥವಾ ಈ ಹೊಂಡಗಳಿಗೆ ಬೇಲಿ ನಿರ್ಮಿಸಿ ಅಂತರ್ ಜಲಾಭಿವೃದ್ಧಿಗೆ ಕ್ರಮ ಜರುಗಿಸಲಾಗುವುದೇ ?



## ಅನಧಿಕೃತ ಜಾಹಿರಾತು ಫಲಕ ಹಾಗೂ ಫ್ಲೆಕ್ಸ್‌ಗಳ ಹಾವಳಿ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೬೮ (೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನಲ್ಲಿ ಅನಧಿಕೃತ ಜಾಹಿರಾತು ಫಲಕ ಹಾಗೂ ಫ್ಲೆಕ್ಸ್‌ಗಳ ಹಾವಳಿಯು ವಿಪರೀತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಬಿ.ಬಿ.ಎಂ.ಪಿ.ಗೆ ಕ್ರಮ ಜರುಗಿಸುವಂತೆ ಸರ್ಕಾರ ಸೂಚಿಸಿದ್ದರೂ, ಪರಿಣಾಮಕಾರಿಯಾಗಿ ಕ್ರಮ ಜರುಗಿಸದಿರುವುದು ನಿಜವೇ ;

(ಇ) ನಿಯಮ ಬಾಹಿರವಾಗಿ ಹಾಕಿರುವ ಫ್ಲೆಕ್ಸ್‌ಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಫ್ಲೆಕ್ಸ್ ಬ್ಯಾನರ್ ಹಾಕಲು ಇರುವ ಮಾನದಂಡಗಳೇನು ; ಈ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸಲಾಗುತ್ತಿದೆಯೇ ;

(ಉ) ರಾಜ್ಯದಲ್ಲಿ ಫ್ಲೆಕ್ಸ್ ಬ್ಯಾನರ್‌ಗಳನ್ನು ನಿಯಂತ್ರಿಸಲು ಅಗತ್ಯವಿರುವ ಕಾನೂನುಗಳನ್ನು ರಾಜ್ಯ ಸರ್ಕಾರ ಕೂಡಲೇ ರೂಪಿಸುವುದೇ ;

(ಊ) ಉಪಯೋಗಿಸಿದ ಫ್ಲೆಕ್ಸ್ ಬ್ಯಾನರ್‌ಗಳನ್ನು (ತ್ಯಾಜ್ಯ) ಯಾವ ರೀತಿಯಲ್ಲಿ ನಾಶಪಡಿಸಲಾಗುತ್ತಿದೆ ?

## ಪ್ರಧಾನ ಮಂತ್ರಿಯವರ ಸ್ವಚ್ಛ ಭಾರತ ಅಭಿಯಾನ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೬೯ (೨೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಧಾನ ಮಂತ್ರಿಯವರ ಸ್ವಚ್ಛ ಭಾರತ ಅಭಿಯಾನವನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಚುನಾಯಿತ ಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳನ್ನು ಈ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಸರ್ಕಾರ ಯೋಚಿಸಿದೆಯೇ ;

(ಇ) ಹಾಗಿದ್ದಲ್ಲಿ, ಇದರ ರೂಪು–ರೇಷೆಗಳೇನು ?

## ವಾಣಿಜ್ಯ ತೆರಿಗೆಯಿಂದ ಬಂದ ಆದಾಯ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೦ (೩೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಾಣಿಜ್ಯ ತೆರಿಗೆಯಿಂದ ಸರ್ಕಾರಕ್ಕೆ ೨೦೧೧–೧೨, ೨೦೧೨–೧೩, ಮತ್ತು ೨೦೧೩–೧೪, ಆರ್ಥಿಕ ವರ್ಷಗಳಲ್ಲಿ ಬಂದ ಆದಾಯವೆಷ್ಟು (ಶೀರ್ಷಿಕೆವಾರು ವಿವರ ನೀಡುವುದು) ;

* ವಾಣಿಜ್ಯ ತೆರಿಗೆ

* ಕೃಷಿ ಆದಾಯ ತೆರಿಗೆ

* ವೃತ್ತಿ ತೆರಿಗೆ



(ಆ) ಪೆಟ್ರೋಲ್, ಡೀಸೆಲ್, ಲೂಬ್ರಿಕೆಂಟ್, ಎಲ್.ಪಿ.ಜಿ. (ಲಿಕ್ವಿಡ್ ಪೆಟ್ರೋಲ್ ಗ್ಯಾಸ್), ನೈಟ್ರೋಜನ್ (ಎಲ್.ಎನ್.ಜಿ) ಗ್ಯಾಸಿನ ಮಾರಾಟದಿಂದ ಸರ್ಕಾರಕ್ಕೆ ಕಳೆದ ೩ ವರ್ಷಗಳಲ್ಲಿ ಬಂದ ಆದಾಯವೆಷ್ಟು (ಶೇಕಡಾವಾರು ವಾಣಿಜ್ಯ ತೆರಿಗೆ ಆದಾಯದ ವಿವರ ನೀಡುವುದು) ;

(ಇ) ವಾಣಿಜ್ಯ ತೆರಿಗೆಯಲ್ಲಿ ಮೇಲಿನ ಅಂಶಗಳ ಶೇಕಡಾವಾರು ಆದಾಯವನ್ನು ವರ್ಷವಾರು ತಿಳಿಸುವುದು ?

## ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನೀಡುವ ಅನುದಾನ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೧ (೩೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮುಜರಾಯಿ ಇಲಾಖೆಯಲ್ಲಿ ೨೦೧೩–೧೪ನೇ ಸಾಲಿನಲ್ಲಿ ಹಾಗೂ ೨೦೧೪–೧೫ನೇ ಸಾಲಿನ ಸೆಪ್ಟೆಂಬರ್ ತಿಂಗಳವರೆಗೆ ರಾಜ್ಯದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನೀಡಿರುವ ಅನುದಾನವೆಷ್ಟು (ದೇವಸ್ಥಾನಗಳ ಹೆಸರುಗಳೊಂದಿಗೆ ಜಿಲ್ಲಾವಾರು ವಿವರ ನೀಡುವುದು) ;

(ಆ) ಈ ದೇವಸ್ಥಾನಗಳಿಗೆ ದೈನಂದಿನ ಪೂಜಾ ಹಾಗೂ ಇತರೆ ಕೆಲಸಕಾರ್ಯಗಳಿಗೆ ನೀಡಿರುವ ತಸ್ತಿಕದ ಮೊತ್ತವೆಷ್ಟು ; ಈ ರೀತಿ ದೇವಸ್ಥಾನಗಳಿಗೆ ನೀಡುವ ತಸ್ತಿಕದ ಒಟ್ಟು ವಾರ್ಷಿಕ ಮೊತ್ತವೆಷ್ಟು ;

(ಇ) ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ಗೌರವ ಸಂಭಾವನೆ ನೀಡುವಲ್ಲಿ ಸರ್ಕಾರದ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

## ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಮರಳು ಪೂರೈಕೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೨ (೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಖಾಸಗಿ ಮತ್ತು ವಾಣಿಜ್ಯ ಕಟ್ಟಡಗಳು ಸೇರಿದಂತೆ ಎಲ್ಲಾ ನಿರ್ಮಾಣ ಕಾಮಗಾರಿಗಳಿಗೆ ಒಟ್ಟು ವಾರ್ಷಿಕ ಅಗತ್ಯವಿರುವ ಮರಳಿನ ಪ್ರಮಾಣವೆಷ್ಟು (ವಿವರ ನೀಡುವುದು) ;

(ಆ) ಮರಳಿನ ವ್ಯವಸ್ಥಿತ ಸರಬರಾಜು ಆಗದಿರುವುದರಿಂದ ವ್ಯವಸ್ಥಿತ ಮರಳಿನ ದಂಧೆ ನಡೆಯುತ್ತಿರುವುದು ಹಾಗೂ ಇದರಿಂದಾಗಿ ಜನಸಾಮಾನ್ಯರ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಗತ್ಯವಿರುವ ಮರಳು ಕೈಗೆಟುಕದಷ್ಟು ದುಬಾರಿಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಇಂತಹ ದಂದೆಯನ್ನು ನಿಯಂತ್ರಣಗೊಳಿಸಿ, ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಮರಳು ಸಿಗುವಂತಾಗಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?



## ವಿವಿಧ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಜಮೀನು ಮಂಜೂರು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೩ (೭೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಮತ್ತು ಮಹಾನಗರಗಳ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಜಮೀನು ಮಂಜೂರಾತಿಗೆ ಮನವಿ ಬಂದರಿರುವುದು ಮತ್ತು ಬರುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಆ ಸಮುದಾಯಗಳಿಗೆ ಜಮೀನು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸರಳ ಮಂಜೂರಾತಿಗೆ ಕಾನೂನು ರೂಪಿಸುವುದು ಅವಶ್ಯಕವಲ್ಲವೇ ; ಈ ಬಗ್ಗೆ ಸರ್ಕಾರದ ಕ್ರಮಗಳೇನು ?

## ಬಿ.ಬಿ.ಎಂ.ಪಿ. ಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೪ (೭೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ನಡೆದಿರುವುದು ಮತ್ತು ಹಾಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಂತಹ ಕಾಮಗಾರಿಗಳ ಸಂಖ್ಯೆ ಎಷ್ಟು ; ಎಷ್ಟು ಕಾಮಗಾರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ ; ಅದರಲ್ಲಿ ಎಷ್ಟು ಕಳಪೆ ಕಾಮಗಾರಿಗಳಾಗಿವೆ ; ಕಳಪೆ ಕಾಮಗಾರಿಗೆ ಹೊಣೆಗಾರಿಕೆ ಗೊತ್ತುಪಡಿಸಲಾಗಿದೆಯೇ ;

(ಇ) ಗೊತ್ತುಪಡಿಸಿದ್ದಲ್ಲಿ ಅಂತಹ ಕಾಮಗಾರಿಗಳ ಒಟ್ಟು ಮೊತ್ತವೆಷ್ಟು ; ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು ; ಕಳಪೆ ಕಾಮಗಾರಿಯನ್ನು ಗುಣಮಟ್ಟಕ್ಕೆ ಸರಿದೂಗಿಸಲು ತಗಲುವ ವೆಚ್ಚವೆಷ್ಟು ;

(ಈ) ಆ ಕಳಪೆ ಕಾಮಗಾರಿಯ ನಷ್ಟವನ್ನು ಗುತ್ತಿಗೆದಾರರಿಂದ ಮತ್ತು ಅಧಿಕಾರಿಗಳಿಂದ ವಸೂಲಿ ಮಾಡಲು ಸರ್ಕಾರ ಕ್ರಮ ಜರುಗಿಸಿದೆಯೇ (ಪೂರ್ಣ ವಿವರ ನೀಡುವುದು) ?

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಸಂಪರ್ಕ ಕಲ್ಪಿಸುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೫ (೧೧೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಟ್ಟು ಮನೆಗಳ ಅಂದಾಜು ಸಂಖ್ಯೆ ನೀರು ಸರಬರಾಜು ಮಂಡಳಿಗೆ ಇದೆಯೇ ;

(ಆ) ಇಲ್ಲಿನ ಎಷ್ಟು ಮನೆಗಳಿಗೆ ಮಂಡಳಿ ಅಧಿಕೃತ ನೀರು ಸಂಪರ್ಕ ಕಲ್ಪಿಸಿದೆ ; ಅನಧಿಕೃತವಾಗಿ ನೀರು ಬಳಕೆಯಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು ;

(ಇ) ಜಲಮಂಡಳಿಯಿಂದ ಕುಡಿಯುವ ನೀರನ್ನು ಶುದ್ದೀಕರಣ ಮಾಡಿ ಪ್ರತಿ ದಿನ ಸರಬರಾಜು ಮಾಡುತ್ತಿರುವ ಒಟ್ಟು ನೀರಿನ ಪ್ರಮಾಣ ಎಷ್ಟು, ಈ ಪೈಕಿ ಮಂಡಳಿ ಬಿಲ್ ಮಾಡುತ್ತಿರುವ ಮೊತ್ತ ಎಷ್ಟು, ಉಳಿಕೆ ಸೋರಿಕೆಯಾಗುತ್ತಿರುವ ನೀರಿನ ಪ್ರಮಾಣ ಎಷ್ಟು ; ಸೋರಿಕೆ ಬಗ್ಗೆ ಜಲಮಂಡಳಿ ತೆಗೆದುಕೊಳ್ಳುತ್ತಿರುವ ಕ್ರಮಗಳೇನು (ಈ ಬಗ್ಗೆ ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಪೂರ್ಣ ವಿವರ ಒದಗಿಸುವುದು) ?



## ಬಿ.ಬಿ.ಎಂ.ಪಿ.ಯಲ್ಲಿ ಆಸ್ತಿ ತೆರಿಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೬ (೭೬&೭೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಬಿ.ಎಂ.ಪಿ. ಯಲ್ಲಿ ಆಸ್ತಿ ತೆರಿಗೆ ಸಂಗ್ರಹಿಸಲು ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು) ;

(ಆ) ಆಸ್ತಿ ತೆರಿಗೆಯನ್ನು ವಂಚಿಸಿರುವ ಆಸ್ತಿಗಳ ಸಂಖ್ಯೆ ಎಷ್ಟು ಹಾಗೂ ಸರ್ಕಾರಕ್ಕೆ ಇದರಿಂದಾಗಿರುವ ನಷ್ಟವೆಷ್ಟು ;

(ಇ) ಯಾವ ಯಾವ ವಾರ್ಡ್‌ಗಳಲ್ಲಿ ಎಷ್ಟೆಷ್ಟು ಆಸ್ತಿಗಳಿಗೆ ತೆರಿಗೆ ವಂಚನೆಯಾಗುತ್ತಿದೆ ;

(ಈ) ಬಿ.ಬಿ.ಎಂ.ಪಿ. ಅಧಿಕಾರಿಗಳು ಪ್ರತಿ ಬಡಾವಣೆಯ ಎಲ್ಲಾ ರಸ್ತೆಗಳ ಆಸ್ತಿಗಳಿಗೆ ಅನುಗುಣವಾಗಿ ನಿವೇಶನ ಸಂಖ್ಯೆಗಳನ್ನು ನೀಡದೆ, ಬಹಳ ವರ್ಷಗಳಿಂದ ಕರ್ತವ್ಯ ಲೋಪ ಮಾಡುತ್ತಿರುವ ಕಾರಣದಿಂದಾಗಿ ಆಸ್ತಿಗಳ ತೆರಿಗೆ ವಂಚನೆಯಾಗುತ್ತಿರುವುದನ್ನು ಪತ್ತೆ ಹಚ್ಚಲು ಸಾಧ್ಯವಾಗದಿರುವುದು ನಿಜವಲ್ಲವೆ ;

(ಉ) ಕೂಡಲೇ ಪ್ರತಿ ಬಡಾವಣೆಗಳಲ್ಲಿನ ಖಾಲಿ ನಿವೇಶನ ಹಾಗೂ ಕಟ್ಟಡಗಳಿಗೆ ಕ್ರಮವಾಗಿ ಅಧಿಕೃತ ನಿವೇಶನ ಸಂಖ್ಯೆಗಳನ್ನು ನೀಡಲು ಪಾಲಿಕೆಯಿಂದ ಕೈಗೊಂಡಿರುವ ಕ್ರಮಗಳೇನು ;

(ಊ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ೨೦೨೦ರ ಮಾಸ್ಟರ್ ಪ್ಲಾನ್ ಯೋಜನೆ ಯಾವ ಹಂತದಲ್ಲಿದೆ (ಪೂರ್ಣ ಮಾಹಿತಿಯನ್ನು ನೀಡುವುದು) ?

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಸೂಲಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭ (೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಾವ ಯಾವ ವಾರ್ಡ್‌ಗಳಲ್ಲಿ ಹಾಲಿ ವರ್ಷದಲ್ಲಿ ಎಷ್ಟೆಷ್ಟು ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯನ್ನು ಸರ್ಕಾರ ಗೊತ್ತುಪಡಿಸಿದೆ ;

(ಆ) ಆಸ್ತಿ ವಂಚನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚು ಇರುತ್ತವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಈವರೆಗೆ ಆಸ್ತಿ ತೆರಿಗೆ ವಂಚಿಸಿರುವ ಪ್ರಕರಣಗಳೆಷ್ಟು ;

(ಈ) ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಬಡಾವಣೆಗಳಿವೆ ; ಸದರಿ ಬಡಾವಣೆಗಳ ಪ್ರತಿ ಆಸ್ತಿಗಳಿಗೆ ಅನುಕ್ರಮವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ನಿವೇಶನ ಸಂಖ್ಯೆಗಳನ್ನು ಪ್ರತಿ ಆಸ್ತಿಗಳಿಗೂ ನೀಡದೆ ಕರ್ತವ್ಯ ಲೋಪವಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಆಸ್ತಿ ತೆರಿಗೆ ವಂಚನೆ ಪತ್ತೆ ಹಚ್ಚಲು ಅನುಸರಿಸಿರುವ ಕ್ರಮಗಳೇನು ;

(ಉ) ಕೂಡಲೇ ಪ್ರತಿ ನಿವೇಶನ ಹಾಗೂ ಕಟ್ಟಡಗಳ ಮೇಲೆ ಹಾಗೂ ಪ್ರತಿ ರಸ್ತೆಗಳಿಗೆ ಹಾಗೂ ರಸ್ತೆ ಫಲಕಗಳಲ್ಲಿ ಆಸ್ತಿ ಸಂಖ್ಯೆಗಳನ್ನು ಬರೆಯಲು ಕೈಗೊಂಡಿರುವ ಕ್ರಮಗಳೇನು ?



## ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮ (೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪ್ರತಿದಿನ ಬೆಂಗಳೂರಿಗೆ ಸರಬರಾಜಾಗುತ್ತಿರುವ ಕುಡಿಯುವ ನೀರಿನ ಪ್ರಮಾಣವೆಷ್ಟು ;

(ಆ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಯಾವ ಯಾವ ಪ್ರದೇಶಗಳಿಗೆ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ ; ವಾರ್ಡ್‌ಗಳವಾರು ಪೂರ್ಣ ಮಾಹಿತಿ ನೀಡುವುದು ;

(ಇ) ಕುಡಿಯುವ ನೀರನ್ನು ಪೂರೈಸಲು ಪ್ರತಿ ವಾರ್ಡ್‌ನಲ್ಲಿ ನೀರಿನ ತೆರಿಗೆ ಸಂಗ್ರಹಣೆಯಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯದ ಮೊತ್ತವೆಷ್ಟು (ವಾರ್ಡ್‌ಗಳವಾರು ಪೂರ್ಣ ಮಾಹಿತಿ ನೀಡುವುದು) ;

(ಈ) ಬೆಂಗಳೂರು ನಗರದ ಪ್ರಸ್ತುತ ಯಾವ ಬಡಾವಣೆ/ಪ್ರದೇಶಗಳಿಗೆ ಹೊಸದಾಗಿ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ ; ಇದಕ್ಕೆ ತಗಲುವ ಅನುದಾನದ ಮೊತ್ತವೆಷ್ಟು (ವಿವರ ನೀಡುವುದು) ;

(ಉ) ಈ ಮಹಾನಗರಕ್ಕೆ ಕುಡಿಯುವ ನೀರನ್ನು ಪೂರೈಸಲು ಕಾವೇರಿ ನದಿಯಿಂದ ಹೊಸ ಯೋಜನೆಯನ್ನೇನಾದರೂ ಸರ್ಕಾರ ರೂಪಿಸಿದೆಯೇ ; ಈ ಯೋಜನೆಯುನ್ನು ಯಾವಾಗ ಪ್ರಾರಂಭಿಸಲಾಗುವುದು (ಪೂರ್ಣ ವಿವರ ನೀಡುವುದು) ?

## ಪಾಸ್‌ಪೋರ್ಟ್ ಸೇವಾ ಕೇಂದ್ರದ ಆರಂಭ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೯ (೧೪೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಆರಂಭಿಸುವ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ ; ಇಲ್ಲದಿದ್ದರೆ ಶಿಫಾರಸ್ಸು ಮಾಡಲು ಕ್ರಮ ತೆಗೆದುಕೊಳ್ಳುವುದೇ ;

(ಆ) ಮೈಸೂರು ನಗರ, ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ಹಾಸನ ಜಿಲ್ಲೆಗಳಿಂದ ಪಾಸ್‌ಪೋರ್ಟ್‌ಗೆ ಕೋರಿಕೆ ಸಲ್ಲಿಸಿ ಬರುವ ಅರ್ಜಿಗಳ ಸಂಖ್ಯೆ, ಪೊಲೀಸ್ ವೇರಿಫಿಕೇಶನ್‌ಗೆ ಬರುವ ಅರ್ಜಿಗಳ ಸಂಖ್ಯೆ ಬಗ್ಗೆ ಅಂಕಿ ಅಂಶಗಳು ಇವೆಯೇ ; ಇದ್ದಲ್ಲಿ, ಒದಗಿಸುವುದು ;

(ಇ) ಈ ಆಧಾರದ ಮೇಲೆ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದೇ ?



## ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ಭರ್ತಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೮೦ (೧೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ದಕ್ಷಿಣ ವಲಯಕ್ಕೆ ಸೇರಿದ ಜಿಲ್ಲೆಗಳಲ್ಲಿ ಎಷ್ಟು ಪಿ.ಎಸ್.ಐ ಹುದ್ದೆಗಳು, ಎಷ್ಟು ವರ್ಷಗಳಿಂದ ಖಾಲಿಯಿವೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಹಾಗೇಯೇ ಇದೇ ವಲಯಕ್ಕೆ ಸೇರಿದ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎ.ಎಸ್.ಐ. ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ; ಇವರುಗಳಲ್ಲಿ ಎಷ್ಟು ಜನ ಎ.ಎಸ್.ಐಗಳು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ (ವಿವರ ನೀಡುವುದು) ;

(ಇ) ಎ.ಎಸ್.ಐ.ಗಳಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಪೊಲೀಸ್ ಇಲಾಖೆಯ ನಿಯಮದ ಪ್ರಕಾರ ಪಿ.ಎಸ್.ಐ. ಹುದ್ದೆಗೆ ಬಡ್ತಿ ನೀಡಲು ಎಷ್ಟು ವರ್ಷ ಸೇವೆ ಸಲ್ಲಿಸಿರಬೇಕು (ವಿವರ ನೀಡುವುದು) ;

(ಈ) ಪಿ.ಎಸ್.ಐ. ಗಳಾಗಿ ಕಳೆದ ೨೦ ರಿಂದ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದವರನ್ನು ಪಿ.ಎಸ್.ಐ ಹುದ್ದೆಗಳಿಗೆ ಬಡ್ತಿ ನೀಡದಿರಲು ಕಾರಣಗಳೇನು (ವಿವರ ನೀಡುವುದು) ;

(ಉ) ಇವರುಗಳಿಗೆ ಬಡ್ತಿ ನೀಡಲು ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಹಿಂದಿರುವ ಮರ್ಮವೇನು; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು (ವಿವರ ನೀಡುವುದು) ;

(ಊ) ಸೇವಾ ವೃತ್ತಿಯಲ್ಲಿ ಒಂದೋ, ಎರಡೋ ಬಡ್ತಿ ಸಿಗುವ ನಿರೀಕ್ಷೆಯಲ್ಲಿರುವ ನೌಕರರಿಗೆ ಬಡ್ತಿ ಹೊಂದಲು ಅರ್ಹರಿದ್ದರೂ ಸಹ ೨೦-೩-ವರ್ಷಗಳಾದರೂ ಖಾಲಿ ಇರುವ ಹುದ್ದೆಗೆ ಬಡ್ತಿ ನೀಡದಿರುವ ಬಗ್ಗೆ ಇಲಾಖೆಯ ನೌಕರರಲ್ಲಿ ಸೇವೆ ಸಲ್ಲಿಸಲು ಸ್ಥೈರ್ಯ ಕುಗ್ಗುವುದಿಲ್ಲವೇ; ಪರಿಸ್ಥಿತಿ ಹೀಗಿರುವಾಗ ಇವರಿಂದ ಯಾವ ರೀತಿಯ ಸೇವೆಯನ್ನು ಅಪೇಕ್ಷಿಸಬಹುದು ಎಂಬುದರ ಬಗ್ಗೆ ವಿವರ ಒದಗಿಸುವುದು ;

(ಋ) ಈಗಲಾದರೂ ಈ ವಲಯದಲ್ಲಿ ೧೫-೨೦ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಾ ಬಂದಿರುವ ಎ.ಎಸ್.ಐ.ಗಳಿಗೆ ತತಕ್ಷಣವೇ ಪಿ.ಎಸ್.ಐ. ಹುದ್ದೆಗಳಿಗೆ ಬಡ್ತಿ ನೀಡಲು ಸರ್ಕಾರ ಸ್ಪಷ್ಟ ಭರವಸೆ ನೀಡುವುದೇ ?

## ಕನ್ನಡ ಚಲನಚಿತ್ರಗಳ ನಕಲಿ ಆಡಿಯೋ-ವಿಡಿಯೋ ತಯಾರಿಕೆ ಮಾರಾಟ

**ಶ್ರೀ ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೮೧ (೧೧೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕನ್ನಡ ಹಾಗೂ ಇತರ ಭಾಷೆಯ ಚಲನಚಿತ್ರಗಳ ಆಡಿಯೋ-ವಿಡಿಯೋ ನಕಲು (ಪೈರಸಿ) ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;



(ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕನ್ನಡ ಹಾಗೂ ಇತರ ಭಾಷೆಯ ನಕಲಿ ಆಡಿಯೋ-ವಿಡಿಯೋಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಮೊಕದ್ದಮೆ ಹೂಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ಎಷ್ಟು ಮೌಲ್ಯದ ನಕಲಿ ಆಡಿಯೋ-ವಿಡಿಯೋಗಳನ್ನು ವಶಪಡಿಸಿಕೊಳ್ಳಲಾಗಿದೆ ;

(ಇ) ಕನ್ನಡ ಹಾಗೂ ಇತರೆ ಭಾಷೆಯ ಚಲನಚಿತ್ರಗಳ ನಕಲಿ ಆಡಿಯೋ-ವಿಡಿಯೋ ತಯಾರಿಕೆ ಮತ್ತು ಮಾರಾಟವನ್ನು ತಡೆಗಟ್ಟಲು ವಿಶೇಷ ಕಾನೂನು ರೂಪಿಸಿ ಜಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಅಕ್ರಮವಾಗಿ ವಾಸಿಸುತ್ತಿರುವ ಬಾಂಗ್ಲಾದೇಶಿಯರು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-**

**೨೮೨ (೧೧೧) ಮಾನ್ಯ ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಬಾಂಗ್ಲಾದೇಶಿಯರ ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ಕುರಿತಂತೆ ರಾಜ್ಯದಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ;

(ಆ) ದಿನೇ ದಿನೇ ಬಾಂಗ್ಲಾ ದೇಶಿಯರ ಸಂಖ್ಯೆ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಮೇಲೆ ಬೀರಬಹುದಾದ

ಪರಿಣಾಮ ಕುರಿತಾಗಿ ಸರ್ಕಾರವು ಗಂಭೀರವಾಗಿ ಚಿಂತಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ;

(ಇ) ಅಕ್ರಮ ವಲಸಿಗರನ್ನು ರಾಜ್ಯದಿಂದ ತೆರವುಗೊಳಿಸುವ ನಿಟ್ಟಿನಲ್ಲಿ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ (ಈ ನಿಟ್ಟಿನಲ್ಲಿ ಇದುವರೆಗಿನ ಪ್ರಗತಿ ಕುರಿತಾಗಿ ಮಾಹಿತಿ ಒದಗಿಸುವುದು) ?

## ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ಪುನಶ್ಚೇತನ.

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

**೨೮೩** (೧೧೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾವತಿಯಲ್ಲಿರುವ ಮೈಸೂರು ಕಾಗದ ಕಾರ್ಖಾನೆಯು ನಷ್ಟದಲ್ಲಿದೆಯೇ; ಹಾಗಿದ್ದಲ್ಲಿ, ನಷ್ಟಕ್ಕೆ ಕಾರಣವಾದ ಅಂಶಗಳು ಯಾವುವು (ಮಾಹಿತಿ ಒದಗಿಸುವುದು) ;

(ಆ) ಕಾರ್ಖಾನೆಯ ಪುನಶ್ಚೇತನ, ಆಧುನೀಕರಣಕ್ಕಾಗಿ ಅವಶ್ಯಕವಿರುವ ಅಂದಾಜು ಹಣವೆಷ್ಟು (ಮಾಹಿತಿ ಒದಗಿಸುವುದು) ;

(ಇ) ಕಾರ್ಖಾನೆಯ ಪುನಶ್ಚೇತನಕ್ಕಾಗಿ ಸರ್ಕಾರವು ಆಲೋಜಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತಾಗಿ ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು (ಪೂರ್ಣ ವಿವರ ಒದಗಿಸುವುದು) ?



## ಮುಜರಾಯಿ ದೇವಸ್ಥಾನಗಳ ಆಸ್ತಿ ರಕ್ಷಣೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೪ (೧೧೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಅವುಗಳಿಗೆ ಸೇರಿದ ಆಸ್ತಿ ಪ್ರಮಾಣ ಎಷ್ಟು; ಭೂಮಿ, ಒಡವೆ ಹಾಗೂ ಇನ್ನಿತರ ವಿವರಗಳನ್ನೊಳಗೊಂಡ ದೇವಾಲಯವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಈ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ಸಂಭಾವನೆ/ ವೇತನದ ವಿವರಗಳನ್ನು ಒದಗಿಸುವುದು ;

(ಇ) ಮುಜುರಾಯಿ ದೇವಾಲಯಗಳಿಗೆ ಸೇರಿದ ಎಷ್ಟು ಪ್ರಮಾಣದ ಭೂಮಿಯನ್ನು ಅತಿಕ್ರಮಿಸಲಾಗಿದೆ ಹಾಗೂ ಈ ದೇವಾಲಯಗಳಲ್ಲಿ ಇದುವರೆಗೆ ಆಗಿರುವ ಹಣದ ಅವ್ಯವಹಾರ, ಕಳುವಾದ ಆಭರಣಗಳ ಕುರಿತಾಗಿ ಪ್ರತ್ಯೇಕವಾದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ;

(ಈ) ದೇವಾಲಯದ ಆಸ್ತಿ, ಆಭರಣಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ; ಈ ಕುರಿತಾಗಿ ಇದುವರೆಗೆ ತೆಗೆದುಕೊಂಡ ಕ್ರಮಗಳ ಪ್ರಗತಿ ಏನು (ಪೂರ್ಣ ವಿವರ ಒದಗಿಸುವುದು) ?

## ನಕಲಿ ನೋಟುಗಳ ನಿಯಂತ್ರಣ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

**೨೮೫ (೧೫೪)** ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಖೋಟಾ ನೋಟುಗಳ ಚಲಾವಣೆ ಹೆಚ್ಚುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ಜಾಲದಲ್ಲಿನ ಎಷ್ಟು ಪ್ರಕರಣಗಳು ಮತ್ತು ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆ (ಸಂಪೂರ್ಣ ಮಾಹಿತಿ ಒದಗಿಸುವುದು) ;

(ಆ) ದೇಶದ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನೇ ಹಾಳು ಮಾಡುವ ಈ ಜಾಲವನ್ನು ಬೇಧಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ವಿಶೇಷ ಕ್ರಮಗಳು ಏನು (ವಿವರ ಒದಗಿಸುವುದು) ?

## ನಗರಾಭಿವೃದ್ಧಿ ಪ್ರಾಧಿಕಾರಗಳ ವಿಫಲತೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೬ (೧೫೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ ಸಾರ್ವಜನಿಕರ ಸಂಖ್ಯೆ ಎಷ್ಟು; ನಿವೇಶನಗಳನ್ನು ವಿತರಿಸುವ ಸಲುವಾಗಿ ಎಷ್ಟು ಬಡಾವಣೆಗಳನ್ನು ನಿರ್ಮಿಸಲಾಗಿದೆ; ಪ್ರಾಧಿಕಾರವಾರು ವರ್ಷವಾರು, ನಿರ್ಮಿಸಿದ ಬಡಾವಣೆಗಳು ಮತ್ತು ವಿತರಿಸಲಾದ ನಿವೇಶನಗಳ ಕುರಿತು ಪ್ರತ್ಯೇಕ ಮಾಹಿತಿ ಒದಗಿಸುವುದು ;



(ಆ) ಇದೇ ಅವಧಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿರ್ಮಿಸಲಾದ ಖಾಸಗೀ ಬಡಾವಣೆಗಳು ಮತ್ತು ಅವುಗಳು ವಿತರಿಸಿದ ನಿವೇಶನಗಳ ಸಂಖ್ಯೆ ಎಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಇ) ಸಾರ್ವಜನಿಕರಿಂದ ಬೇಡಿಕೆಯಿದ್ದರೂ ಸಹ ಪ್ರಾಧಿಕಾರಗಳು ನಿವೇಶನಗಳ ರಚನೆಯಲ್ಲಿ ನಿರ್ಲಕ್ಷ್ಯ ವಹಿಸಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ಆಸ್ತಿ ನೋಂದಣಿ ಶುಲ್ಕ ಪರಿಷ್ಕರಣೆ.

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

**೨೮೭ (೧೫೭)** ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರವೂ ಸೇರಿದಂತೆ ಇತ್ತೀಚೆಗೆ ಮೂರು ಜಿಲ್ಲೆಗಳಲ್ಲಿ ಆಸ್ತಿ ನೋಂದಣಿ ಶುಲ್ಕವನ್ನು ಪರಿಷ್ಕರಿಸಿದ್ದು, ಶೇಕಡವಾರು ಪ್ರಮಾಣ ಹೆಚ್ಚಳವೂ ಸೇರಿದಂತೆ, ಬೆಂಗಳೂರು ನಗರದ ಬಡಾವಣೆವಾರು ಹಿಂದಿನ ಮತ್ತು ಪ್ರಸ್ತುತ ಪರಿಷ್ಕೃತ ಮಾರ್ಗಸೂಚಿ ದರದ ಮಾಹಿತಿಯನ್ನು ಒದಗಿಸುವುದು ;

(ಆ) ಪ್ರಸ್ತುತ ಪರಿಷ್ಕೃತ ದರವು ಹಲವಾರು ಭಾಗಗಳಲ್ಲಿ ಮಾರುಕಟ್ಟೆಯ ದರಕ್ಕಿಂತಲೂ ಹೆಚ್ಚಾಗಿರುವುದು ನಿಜವೇ; ಇದ್ದಲ್ಲಿ, ಮಾಹಿತಿ ಒದಗಿಸುವುದು ;

(ಇ) ಸಾರ್ವಜನಿಕರ ಹಿತದೃಷ್ಟಿಯಿಂದ ಮಾರ್ಗಸೂಚಿ ದರಗಳನ್ನು ಕಡಿಮೆಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು (ಮಾಹಿತಿ ಒದಗಿಸುವುದು) ?

## ಕಸ ವಿಲೇವಾರಿಗಾಗಿ ವ್ಯಯಿಸಿದ ಹಣ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೮ (೧೫೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ನಗರದ ಕಸ ವಿಲೇವಾರಿಗಾಗಿ ಸರ್ಕಾರವು ವ್ಯಯಿಸಿದ ಹಣವೆಷ್ಟು (ವರ್ಷವಾರು ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಆ) ಕಸ ವಿಲೇವಾರಿ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳು ಹಾಗೂ ಗುತ್ತಿಗೆದಾರರು ಯಾರು ; ಈ ಅವಧಿಯಲ್ಲಿ ಕಸ ವಿಲೇವಾರಿಗಾಗಿ ಅವರಿಗೆ ಪಾವತಿಸಲಾದ ಹಣವೆಷ್ಟು; ವರ್ಷವಾರು, ಸಂಸ್ಥೆವಾರು, ವಾರ್ಡ್‌ವಾರು ಪಾವತಿಸಲಾದ ಹಣ ಇವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಇ) ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆಲೋಚಿಸಿದೆ (ಸಂಪೂರ್ಣ ಮಾಹಿತಿ ಒದಗಿಸುವುದು) ?



## ಧಾರ್ಮಿಕ ಯಾತ್ರಾ ಸ್ಥಳ ಅಭಿವೃದ್ಧಿ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೯ (೧೫೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರ್ಮಿಕ ಯಾತ್ರಾ ಸ್ಥಳಗಳಾದ ಧರ್ಮಸ್ಥಳ, ಮಂತ್ರಾಲಯ, ಕೊಲ್ಲೂರು ಮೂಕಾಂಬಿಕೆ, ಹೊರನಾಡು ಅನ್ನಪೂರ್ಣೇಶ್ವರಿ, ಮುರ್ಡೇಶ್ವರ ಮತ್ತಿತರ ಸ್ಥಳಗಳಲ್ಲಿ ಯಾತ್ರಿಗಳಿಗೆ ತಂಗಲು ಸರ್ಕಾರದ ವತಿಯಿಂದ ಹಾಲಿ ಇರುವ ವಸತಿ ಗೃಹಗಳ ಸೌಕರ್ಯ ಅತ್ಯಲ್ಪವಾಗಿದ್ದು, ಈ ಸೌಲಭ್ಯವನ್ನು ಇನ್ನಷ್ಟು ಹೆಚ್ಚಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಆ) ಮೇಲ್ಕಾಣಿಸಿದ ಯಾತ್ರಾಸ್ಥಳಗಳಲ್ಲಿ, ಹಾಲಿ ಇರುವ ಸರ್ಕಾರದ ಕಟ್ಟಡಗಳಲ್ಲಿ ಯಾತ್ರಿಗಳು ತಂಗಲು ಇರುವ ಕೊಠಡಿಗಳ ಸಂಖ್ಯೆ ಎಷ್ಟು; ಎಷ್ಟು ಮಂದಿ ಯಾತ್ರಿಕರು ಈ ಸೌಲಭ್ಯವನ್ನು ಪಡೆದಿರುತ್ತಾರೆ ;

(ಇ) ಹೊರರಾಜ್ಯಗಳಲ್ಲಿರುವ ಯಾತ್ರಾ ಸ್ಥಳಗಳಾದ ತಿರುಪತಿ, ಮಂತ್ರಾಲಯ, ಕಾಶಿ, ಶಬರಿಮಲೆಯಲ್ಲಿ ಸರ್ಕಾರದ ವಸತಿ ಗೃಹಗಳ ವ್ಯವಸ್ಥೆ ಇದೆಯೇ; ಇದ್ದಲ್ಲಿ, ಅದರ ವಿವರ ಹಾಗೂ ಮುಂಬರುವ ವರ್ಷಗಳಲ್ಲಿ ಮೇಲ್ಕಾಣಿಸಿದ ಯಾತ್ರಾ ಸ್ಥಳಗಳಲ್ಲಿ ಸರ್ಕಾರವು ವಸತಿ ಗೃಹಗಳನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾಗಿರುವ ಯೋಜನೆಗಳೇನು (ವಿವರ ನೀಡುವುದು) ?

## ಶ್ರೀರಂಗನಾಥಸ್ವಾಮಿ ದೇವಸ್ಥಾನದ ಕಳಶ ಪ್ರತಿಷ್ಠಾಪನೆ

**ಶ್ರೀ ಸಿ.ಹೆಚ್. ವಿಜಯಶಂಕರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೯೦ (೪೮೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿರುವ ಪುರಾಣ ಪ್ರಸಿದ್ಧ ಶ್ರೀರಂಗನಾಥ ದೇವಾಲಯದ ರಾಜಗೋಪುರದಲ್ಲಿ ಶಿಥಿಲತೆ ಉಂಟಾಗಿ ರಾಜಗೋಪುರದ ಕಳಶಗಳು ಈಗಾಗಲೇ ಕಳಚಿಬಿದ್ದಿರುವುದಲ್ಲದೆ, ಸದರಿ ಕಟ್ಟಡದಲ್ಲಿ ಬಿರುಕುಗಳುಂಟಾಗಿ ಕಲ್ಲುಗಳು ಒಂದೊಂದಾಗಿ ಕುಸಿಯುತ್ತಿರುವುದಾಗಿ ಸ್ಥಳೀಯ ದಿನಪತ್ರಿಕೆಯೊಂದು ವರದಿ ಮಾಡಿದ್ದು, ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರಾಜಗೋಪುರವನ್ನು ಕಲ್ಲಿನ ಗೋಡೆಗಳಿಂದ ನಿರ್ಮಾಣ ಮಾಡಲಾಗಿದ್ದು, ಕಲ್ಲಿನ ಗೋಡೆಯೇ ಗೋಪುರಕ್ಕೆ ಶ್ರೀರಕ್ಷೆಯಾಗಿದ್ದು, ಆದರೆ ಇದೀಗ ರಾಜಗೋಪುರದ ಕಟ್ಟಡದಲ್ಲಿ ಬಿರುಕು ಉಂಟಾದ ಕಾರಣಕ್ಕಾಗಿ ಒಂದೊಂದಾಗಿ ಕಲ್ಲುಗಳು ಬೀಳತೊಡಗಿದ್ದು, ಇದೇ ಪರಿಸ್ಥಿತಿ ಮುಂದುವರೆದರೆ ಗೋಪುರಕ್ಕೆ ಅನಾಹುತ ಉಂಟಾಗುವುದನ್ನು ತಪ್ಪಿಸಲು ತುರ್ತು ಕ್ರಮಕ್ಕಾಗಿ ಸರ್ಕಾರ ತಜ್ಞರಿಂದ ವರದಿಯನ್ನು ಪಡೆದಿದೆಯೇ ;

(ಇ) ಸದ್ಯ ಶಿಥಿಲಗೊಂಡಿರುವ ರಾಜಗೋಪುರದ ಕಟ್ಟಡ ದುರಸ್ಥಿ ಹಾಗೂ ಕಳಶ ಪ್ರತಿಷ್ಠಾಪನೆ ಎರಡೂ ಕಾರ್ಯಕ್ಕಾಗಿ ಸರ್ಕಾರ ಈವರೆವಿಗೂ ತೆಗೆದುಕೊಂಡ ಕ್ರಮಗಳೇನು ;



(ಈ) ಈ ನಿಟ್ಟಿನಲ್ಲಿ ಸ್ಥಳೀಯ ಜಿಲ್ಲಾಧಿಕಾರಿಗಳಿಂದ ತತಕ್ಷಣ ವರದಿ ಪಡೆದು ರಾಜಗೋಪುರದ ದುರಸ್ಥಿ ಹಾಗೂ ಕಳಶ ಪ್ರತಿಷ್ಟಾರ್ಪನೆಯ ಕಾರ್ಯ್ರ ಕೈಗೆತ್ತಿಕೊಳ್ಳಲು ಅತೀ ಜರೂರಾಗಿ ಗಮನ ಹರಿಸಲಾಗುವುದೇ ?

## ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ವಾಹನಗಳ ಮುಟ್ಟುಗೋಲು

**ಶ್ರೀ ಸಿ.ಹೆಚ್. ವಿಜಯಶಂಕರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೯೧ (೩೮೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡ ನಂತರ ಪ್ರಕರಣ ದಾಖಲಿಸಿ, ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣ ಇತ್ಯರ್ಥಗೊಳ್ಳುವರೆಗೆ ಈ ರೀತಿಯ ವಾಹನಗಳನ್ನು ಪೊಲೀಸ್ ಕೇಂದ್ರಸ್ಥಾನಗಳಲ್ಲಿ ಮತ್ತು ಪೊಲೀಸ್ ಠಾಣೆಗಳಲ್ಲಿ ಕಾಯ್ದಿರಿಸುವ ಪದ್ಧತಿ ಹಾಲಿ ಜಾರಿಯಲ್ಲಿರುವುದು ನಿಜವೇ ;

(ಆ) ಮುಟ್ಟುಗೋಲು ಹಾಕಿಕೊಂಡ ವಾಹನಗಳ ಪ್ರಕರಣಗಳು ಇತ್ಯರ್ಥಗೊಳ್ಳಲು ಕೆಲವು ಸಂದರ್ಭಗಳಲ್ಲಿ ಹಲವು ವರ್ಷಗಳೇ ತೆಗೆದುಕೊಳ್ಳಲಿದ್ದು, ಈ ಕಾರಣಕ್ಕಾಗಿ ವಾಹನಗಳ ಸಹಜ ಸ್ಥಿತಿ ಹಾಳಾಗಿ ಅವುಗಳು ದುಸ್ಥಿತಿಗೆ ತಲುಪಿ ನಿರುಪಯುಕ್ತವಾಗುತ್ತಿದ್ದು, ಇದನ್ನು ತಪ್ಪಿಸಲು ಅಪರಾಧ ಪ್ರಕರಣದಲ್ಲಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡ ಮರುಗಳಿಗೆಯಲ್ಲಿ ಘನ

ನ್ಯಾಯಾಲಯದ ಅನುಮತಿ ಪಡೆದು ವಾಹನಗಳನ್ನು ಹರಾಜು ಹಾಕಿ ಈ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕಾಯ್ದಿರಿಸಿ ಪ್ರಕರಣ ಇತ್ಯರ್ಥಕ್ಕನುಗುಣವಾಗಿ ಹಣ ವಿಲೇವಾರಿ ಮಾಡಲು ಮತ್ತು ಮುಂದಿನ ಕ್ರಮ ಜರುಗಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಇ) ಸದ್ಯ ಇರುವ ನಿಯಮಾವಳಿಗೆ ಕಾನೂನಾತ್ಮಕ ತಿದ್ದುಪಡಿಗಳನ್ನು ತರಲು ಮತ್ತು ಈ ರಾಷ್ಟ್ರೀಯ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸೂಕ್ತ ರೀತಿಯಲ್ಲಿ ಗಮನಹರಿಸಲಾಗುವುದು ?

## ಅವೈಜ್ಞಾನಿಕವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ನಿಯಂತ್ರಣ

**ಶ್ರೀ ಸಿ.ಹೆಚ್. ವಿಜಯಶಂಕರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೯೨ (೪೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರಾಜಧಾನಿ ಬೆಂಗಳೂರು ನಿರೀಕ್ಷೆಗೂ ಮೀರಿ ಅತಿ ವೇಗದಲ್ಲಿ ಅವೈಜ್ಞಾನಿಕವಾಗಿ ಬೆಳೆಯುತ್ತಿದ್ದು, ಇದೇ ಪರಿಸ್ಥಿತಿ ಮುಂದುವರೆದಲ್ಲಿ ಮುಂದಿನ ದಿನಗಳಲ್ಲಿ ನಾಗರೀಕ ಸೌಲಭ್ಯ ಹಾಗೂ ಇತರೆ ಪೂರಕ ಅನುಕೂಲತೆಗಳ ಬಹುದೊಡ್ಡ ಸಮಸ್ಯೆ ಸರ್ಕಾರಕ್ಕೆ ಎದುರಾಗುವುದಿಲ್ಲವೇ ;



(ಆ) ಸದ್ಯದ ಸ್ಥಿತಿಯಲ್ಲಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಹದ್ದುಬಸ್ತುಗಳನ್ನು ಗುರುತಿಸಿ ಪೂರಕ ಯೋಜನೆಗಳನ್ನು ರೂಪಿಸುವುದು ಬಹುದೊಡ್ಡ ಅವಾಂತರವಾಗಿ ಕಾಣುತ್ತಿರುವುದು ನಿಜವಲ್ಲವೇ ;

(ಇ) ಸದ್ಯ ಬೆಂಗಳೂರು ಬೆಳೆಯುತ್ತಿರುವ ರೀತಿ ಹಾಗೂ ಮಿತಿ ಮೀರಿದ ಜನಸಂಖ್ಯೆಯು ಒತ್ತಡ ಹಾಗೂ ವಾಹನ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಈ ನಗರವನ್ನು ಮುಂದಿನ ದಿನಗಳಲ್ಲಿ ನಿಯಂತ್ರಣದಲ್ಲಿರಿಸಲು ವಾಹನ ನೋಂದಣಿ ರದ್ದುಪಡಿಸುವುದು, ಹೆಚ್ಚುವರಿ ಕಂದಾಯ ಭೂಮಿಯನ್ನು ವಸತಿ ಭೂಮಿಯನ್ನಾಗಿ ಪರಿವರ್ತಿಸುವ ಪದ್ಧತಿ ಕೈಬಿಡುವುದು ಮತ್ತು ಈ ಬೆಳವಣಗೆಯನ್ನು ನಿಯಂತ್ರಣದಲ್ಲಿರಿಸಲು ತಜ್ಞರಿಂದ ವೈಜ್ಞಾನಿಕ ವರದಿ ಪಡೆದು ಅವಶ್ಯವಿರುವ ಪೂರಕ ಕ್ರಮಗಳನ್ನು ಈ ಕಾರಣಕ್ಕಾಗಿ ಜರುಗಿಸಲು ಸರ್ಕಾರ ಯೋಚಿಸುತ್ತದೆಯೇ ;

(ಈ) ಹಾಗಿದ್ದಲ್ಲಿ, ಈಗ ಬೆಂಗಳೂರು ನಗರ ಬೆಳೆಯುತ್ತಿರುವ ರೀತಿಯಲ್ಲಿ ನಿಯಂತ್ರಣದಲ್ಲಿರಿಸಲು ರಾಜ್ಯದ ಇತರೆ ನಗರಗಳು ಸಮಾನಾಂತರವಾಗಿ ಬೆಳೆಯಲು ಈ ನಗರದ ಮೇಲಿರುವ ಒತ್ತಡವನ್ನು ಬೇರೆ ಬೇರೆ ನಗರಗಳಿಗೆ ವರ್ಗಾಯಿಸಲು ಸರ್ಕಾರವು ಸೂಕ್ತ ಮಾರ್ಗಸೂಚಿ ಮತ್ತು ನಯಮಗಳನ್ನು ಅಳವಡಿಸಿಕೊಳ್ಳಲು ಕೂಡಲೇ ಕಾರ್ಯಪ್ರವೃತ್ತವಾಗುವುದೇ (ವಿವರಗಳನ್ನು ಒದಗಿಸುವುದು) ?

## ಕುಡಿಯುವ ನೀರು ಸರಬರಾಜು

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೯೩ (೩೯೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕುಡಿಯುವ ನೀರಿನ ೨೪/೭ ಸಮಗ್ರ ಯೋಜನೆಯಂತೆ ಮಾನ್ವಿ, ರಾಯಚೂರು, ದೇವದುರ್ಗ ಮತ್ತು ಸಿಂಧನೂರು ನಗರ ಪ್ರದೇಶಗಳಲ್ಲಿ ಯಾವ ಯಾವ ಯೋಜನೆಗಳನ್ನು ತರಲು ಸರ್ಕಾರವು ಉದ್ದೇಶಿಸಿದೆ ;

(ಆ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಈಗಾಗಲೇ ಯಾವ ಕ್ರಮವನ್ನು ಕೈಗೊಂಡಿದೆ ;

(ಇ) ಪ್ರಸ್ತುತ ಈ ಯೋಜನೆಗಳ ಸ್ಥಿತಿಗತಿಗಳೇನು ?

## ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೪ (೩೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು (ವರ್ಷಾವಾರು, ಬಡಾವಣೆವಾರು ಮತ್ತು ಎಕ್ಕರೆವಾರು ಸಂಪೂರ್ಣ ಮಾಹಿತಿ ನೀಡುವುದು) ;



(ಆ) ಜಮೀನುಗಳ ಸ್ವಾಧೀನದ ಪ್ರಾರಂಭಿಕ ಅಧಿಸೂಚನೆಯ ನಂತರ ಕೈಬಿಡಲಾದ ಜಮೀನಿನ ವಿಸ್ತೀಣವೆಷ್ಟು; ಕೈಬಿಡಲು ಕಾರಣಗಳೇನು (ಕಳೆದ ೩ ವರ್ಷಗಳ ಬಡಾವಣೆವಾರು ವಿವರ ನೀಡುವುದು ;

(ಇ) ಈಗಾಗಲೇ ನಿರ್ಮಿಸಲಾಗಿರುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದಿರುವುದರಿಂದ ಮನೆಗಳ ನಿರ್ಮಾಣ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು ?

## ಸಣ್ಣ ಕೈಗಾರಿಕೆಗಳ ಯೋಜನೆಗಳು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೫ (೩೯೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಸಣ್ಣ ಕೈಗಾರಿಕಾ ಇಲಾಖೆಯಿಂದ ಕೈಗೊಂಡಿರುವ ಯೋಜನೆಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು) ;

(ಆ) ಜಿಲ್ಲಾ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರದಿಂದ ಯಾವ ಯಾವ ಉದ್ಯಮಗಳಿಗೆ ಯಾವ ಯೋಜನೆಯಡಿಯಲ್ಲಿ ಅನುದಾನ ನೀಡಲಾಗುವುದು (ಯೋಜನೆಯ ಹೆಸರು ಮತ್ತು ನಿಗದಿಪಡಿಸಿರುವ ಅನುದಾನದ ವಿವರ ನೀಡುವುದು) ;

(ಇ) ಸದರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುವುದೇ ;

(ಈ) ಹಾಗಿದ್ದಲ್ಲಿ, ಇದುವರೆವಿಗೂ ಕೇಂದ್ರ ಸರ್ಕಾರ ನೀಡಿರುವ ಎಷ್ಟು ಅನುದಾನವನ್ನು ವಿನಿಯೋಗಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ?

## ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೬ (೩೯೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳ ಶೀಘ್ರ ಹಾಗೂ ನಿರ್ಧಿಷ್ಟ ವಿಲೇವಾರಿಯಲ್ಲಿ ಇತ್ಯರ್ಥಕ್ಕೆ ಸರ್ಕಾರ ಯಾವ ಕ್ರಮಕೈಗೊಂಡಿದೆ ;

(ಇ) ಹಾಗಿದ್ದಲ್ಲಿ, ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆಯೇ ;

(ಈ) ನ್ಯಾಯಾಲಯವಾರು ಮೂರು ವರ್ಷಕ್ಕೂ ಮೇಲ್ಪಟ್ಟು ಇರುವ ದಿವಾಣಿ ವ್ಯಾಜ್ಯಗಳ ಸಂಖ್ಯೆ ಎಷ್ಟು ?



## ಬೆಂಗಳೂರಿನ ವಿಶ್ವೇಶ್ವರಯ್ಯ ಬಡಾವಣೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೭ (೩೯೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ್ದು, ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ;

(ಆ) ಈ ಬಡಾವಣೆಯನ್ನು ಬಿ.ಡಿ.ಎ ಬಹಳ ವರ್ಷಗಳಿಂದ ನಿರ್ವಹಿಸುತ್ತಿದ್ದು ಈ ಬಡಾವಣೆಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ;

(ಇ) ಮೂಲಭೂತ ಸೌಕರ್ಯ ಕಲ್ಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಸಕ್ತ ವರ್ಷದಲ್ಲಿ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ (ಕಾಮಗಾರಿಗಳ ವಿವರ ನೀಡುವುದು) ?

## ಕಾನೂನು ಸುವ್ಯವಸ್ಥೆ ಕಾಪಾಡುವ ಸಿಬ್ಬಂದಿ ನೇಮಕಾತಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೮ (೩೯೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಒಳಾಡಳಿತ ಇಲಾಖೆಗೆ ಮಂಜೂರಾದ ಮತ್ತು ಕೊರತೆ ಇರುವ ವಿವಿಧ ವರ್ಗಗಳ ಹುದ್ದೆಗಳೆಷ್ಟು; ಅವುಗಳನ್ನು ಭರ್ತಿಗೊಳಿಸಲು ಸರ್ಕಾರದ ಕ್ರಮಗಳೇನು ;

(ಆ) ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅಪರಾಧಗಳನ್ನು ಗಮನಿಸಿ ಸಿಬ್ಬಂದಿ ನೇಮಕಾತಿಯನ್ನು ಮಾಡಿ ಗೃಹ ಇಲಾಖೆಯ ಕಾರ್ಯ ಕ್ಷಮತೆ ಮತ್ತು ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸುವ ಬಗ್ಗೆ ಸರ್ಕಾರದ ನಿಲುವೇನು ;

(ಇ) ಒಳಾಡಳಿತ ಇಲಾಖೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ದಿಶೆಯಲ್ಲಿ ಅನುಸರಿಸುತ್ತಿರುವ ಕ್ರಮಗಳೇನು ?

## ಹೈದರಾಬಾದ್–ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಮೀಸಲಾತಿ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

೨೯೯ (೪೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾರತದ ಸಂವಿಧಾನದ ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶ ಹೊರತುಪಡಿಸಿ ರಾಜ್ಯ ಮಟ್ಟದ ನೇಮಕಾತಿ, ಬಡ್ತಿ ಹಾಗೂ ವೃತ್ತಿಪರ ಶಿಕ್ಷಣ ಪ್ರವೇಶಗಳಲ್ಲಿ ೮% ಮೀಸಲಾತಿ ಕಲ್ಪಿಸಲಾಗಿದ್ದು, ಈ ಮೀಸಲಾತಿ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಅವು ಯಾವ ಹಂತದಲ್ಲಿವೆ; ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸವಿವರ ಮಾಹಿತಿ ನೀಡುವುದು ;



(ಆ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಕಲ್ಪಿಸಲಾದ ರಾಜ್ಯ ಮಟ್ಟದ ೮% ಮೀಸಲಾತಿ ಅನುಷ್ಠಾನ ಮಾಡುವಲ್ಲಿ ಇರುವ ಗೊಂದಲಗಳೇನು; ಸಂವಿಧಾನ ತಿದ್ದುಪಡಿಯಲ್ಲಾದ ಲೋಪವೋ ಅಥವಾ ಆಡಳಿತಾತ್ಮಕ ಗೊಂದಲವೋ (ಮಾಹಿತಿ ನೀಡುವುದು) ;

(ಇ) ಈ ಗೊಂದಲ ಲೋಪ ಸರಿಪಡಿಸಿ ಈ ಭಾಗದ ಜನರ ಆಶೋತ್ತರಗಳಿಗೆ ಸ್ಪಂದಿಸಲು ಸರ್ಕಾರ ಮುಂದಾಗುವುದೇ; ಈ ನಿಟ್ಟಿನಲ್ಲಿ ಸರ್ಕಾರ ಕಾನೂನು/ಸಂವಿಧಾನ ತಜ್ಞರ ಅಭಿಪ್ರಾಯ ಪಡೆದಿದೆಯೇ; (ವಿವರ ನೀಡುವುದು)

(ಈ) ಈ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ?

## ಪೊಲೀಸ್ ಸಿಬ್ಬಂದಿಗೆ ಹೊಸ ವಸತಿ ಗೃಹಗಳ ನಿರ್ಮಾಣ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೦೦ (೫೫೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಪೊಲೀಸ್ ಸಿಬ್ಬಂದಿಗೆ ಹೊಸ ವಸತಿ ಗೃಹಗಳ ನಿರ್ಮಾಣ ಮಾಡಲಾಗುತ್ತದೆಯೇ ;

(ಆ) ಇದಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ ;

(ಇ) ಎಲ್ಲೆಲ್ಲಿ ಹೊಸ ವಸತಿ ಗೃಹಗಳ ನಿರ್ಮಾಣ ಮಾಡಲಾಗುತ್ತಿದೆ ;

(ಈ) ಹೊಸ ವಸತಿ ಗೃಹಗಳ ನಿರ್ಮಾಣದಿಂದ ಎಷ್ಟು ಪೊಲೀಸ್ ಸಿಬ್ಬಂದಿಗಳಿಗೆ ಸೌಕರ್ಯ ಒದಗಿಸಿದಂತಾಗುತ್ತದೆ ?

## ನಿರಂತರ ಕುಡಿಯುವ ನೀರು ಪೂರೈಕೆ ಕಾಮಗಾರಿ ವಿಳಂಬ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೦೧ (೪೪೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಬಳ್ಳಾರಿ ನಗರದ ಜನರಿಗೆ ಎಷ್ಟು ದಿನಕ್ಕೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿದೆ ;

(ಆ) ಬಳ್ಳಾರಿ ನಗರಕ್ಕೆ 24 X 7 ಕುಡಿಯುವ ನೀರು ಪೂರೈಕೆ ಕಾಮಗಾರಿ ಯಾವ ಹಂತದಲ್ಲಿದೆ ;

(ಇ) ಈ ಕಾಮಗಾರಿ ಮಂಜೂರಾದ ಸಮಯದಲ್ಲಿ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಮಯ ನಿಗದಿಪಡಿಸಲಾಗಿತ್ತು ;

(ಈ) ಇಲ್ಲಿಯವರೆಗೆ ಈ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ;

(ಉ) ಎಷ್ಟು ಶೀಘ್ರದಲ್ಲಿ 24 X 7 ಕುಡಿಯುವ ನೀರು ಪೂರೈಕೆ ಕಾಮಗಾರಿ ಪೂರೈಸಲಾಗುತ್ತದೆ ?

## ಮಹಾನಗರ ಪಾಲಿಕೆಗಳಿಗೆ ಒದಗಿಸಿದ ಅನುದಾನ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೦೨ (೫೫೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಗೆ ವಿವಿಧ ಯೋಜನೆಯಡಿ ಎಷ್ಟು ಅನುದಾನ ಒದಗಿಸಲಾಗಿದೆ (ಪಾಲಿಕೆವಾರು ವಿವರ ಒದಗಿಸುವುದು) ;



(ಆ) ನೀಡಲಾದ ಅನುದಾನದಲ್ಲಿ ಎಷ್ಟು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಮತ್ತು ಪ್ರಾರಂಭಿಸಬೇಕಾಗಿದೆ (ಕಾಮಗಾರಿವಾರು ವಿವರ ನೀಡುವುದು) ;

(ಇ) ಬಳ್ಳಾರಿ ಮಹಾನಗರ ಪಾಲಿಕೆಯಿಂದ ಕಳೆದ ವರ್ಷ ಪ್ರಾರಂಭಿಸಲಾದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದೆಯೇ; ಇನ್ನು ಯಾವ ಕಾಮಗಾರಿಗಳು ಪೂರ್ಣಗೊಂಡಿಲ್ಲ; ಅದಕ್ಕೆ ಕಾರಣಗಳೇನು (ಎಲ್ಲಾ ಕಾಮಗಾರಿಗಳ ವಿವರ ನೀಡುವುದು) ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೦೩ (೪೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಬಿ.ಡಿ.ಎ ವತಿಯಿಂದ ಕಟ್ಟಲಾಗಿರುವ ವಾಣಿಜ್ಯ ಸಂಕೀರ್ಣಗಳು ಎಷ್ಟು; ಯಾವ ಯಾವ ಸಂಕೀರ್ಣಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ ಇದಕ್ಕೆ ತಗಲಿರುವ ವೆಚ್ಚವೆಷ್ಟು; ಆ ಸಂಕೀರ್ಣಗಳಲ್ಲಿ ಯಾವ ದರದಲ್ಲಿ ಯಾರ್ಯಾರಿಗೆ / ಯಾವ ಯಾವ ಸಂಸ್ಥೆಗಳಿಗೆ ಜಾಗ / ಕೊಠಡಿ ನೀಡಲಾಗಿದೆ (ಸಂಕೀರ್ಣವಾರು ಮಾಹಿತಿ ನೀಡುವುದು) ;

(ಆ) ನಿರ್ಮಾಣಗೊಂಡಿರುವ ವಾಣಿಜ್ಯ ಸಂಕೀರ್ಣಗಳಲ್ಲಿ ಬಾಡಿಗೆದಾರರು ಬಿ.ಡಿ.ಎ ನಿರ್ಮಾಣ ಹೊರತುಪಡಿಸಿ ಅನುಮತಿ ಇಲ್ಲದೆ ವಿಸ್ತರಿಸಿಕೊಂಡು ಕಟ್ಟಡಗಳನ್ನು ಕಟ್ಟಿಕೊಂಡು ಅತಿಕ್ರಮವಾಗಿ ಸ್ವಾಧೀನದಲ್ಲಿ ಇದ್ದಾರೆಯೇ; ಇದ್ದರೆ, ಅಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ?

## ಮಹಿಳೆಯರು ಮತ್ತು ಶಾಲಾ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೦೪ (೪೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರೇತರ ಕನ್ನಡ ಮತ್ತು ಸೆಂಟ್ರಲ್ ಸಿಲಬಸ್ ಹೊಂದಿರುವ ಶಾಲೆಗಳು ಎಷ್ಟು ಇವೆ; ಅವು ಯಾವುವು; ಎಲ್ಲೆಲ್ಲಿ ಇವೆ (ವಿವರ ನೀಡುವುದು) ;

(ಆ) ಇಂತಹ ಶಾಲೆಗಳ ಆಡಳಿತ ಮಂಡಳಿಯಲ್ಲಿ ಇರುವವರು ಯಾರು; (ಶಾಲಾವಾರು ವಿವರ ನೀಡುವುದು) ಈ ಶಾಲೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ೨೦೧೧–೧೨, ೨೦೧೨–೧೩, ೨೦೧೩–೧೪ ಸಾಲುಗಳ ಮಹಿಳೆಯರ/ಶಾಲಾ ಬಾಲಕಿಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯಗಳು ಎಷ್ಟು; ಎಷ್ಟರಲ್ಲಿ ತನಿಖೆಯಾಗಿದೆ; ತನಿಖೆಯಾಗಿ ಎಷ್ಟಕ್ಕೆ ಚಾರ್ಜ್ ಶೀಟ್ ಹಾಕಲಾಗಿದೆ; ಎಷ್ಟು ಪ್ರಕರಣಗಳಲ್ಲಿ ತನಿಖೆ ಹಂತದಲ್ಲಿ ಬಿ–ರಿಪೋರ್ಟ್ ಆಗಿ ತನಿಖೆ ಕೈ ಬಿಡಲಾಗಿದೆ ;

(ಈ) ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ; ನ್ಯಾಯಾಲಯದ ಮುಂದೆ ಇತ್ಯರ್ಥ ಆಗಿ ಶಿಕ್ಷೆ ಆಗಿದೆ; ಎಷ್ಟು ಖುಲಾಸೆ ಆಗಿದೆ; (ಪೂರ್ಣ ಕೇಸ್‌ವಾರು ವಿವರ ನೀಡುವುದು) ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು) ?



## ಕಾರ್ಯನಿರ್ವಹಿಸಲು ವಕೀಲರಿಗೆ ಪ್ರೋತ್ಸಾಹ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೦೫ (೪೫೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ವಕೀಲರು ಕಾರ್ಯನಿರ್ವಹಿಸುತ್ತಿದ್ದಾರೆ; ಯಾವ ಯಾವ ತಾಲ್ಲೂಕಿನಲ್ಲಿ ಇದ್ದಾರೆ; (ವಿವರ ನೀಡುವುದು) ಇವರ ಪೈಕಿ ಎಸ್.ಸಿ, ಎಸ್.ಟಿ, ಒಬಿಸಿಗೆ ಎಷ್ಟು ಜನ ಸೇರಿದವರಿದ್ದಾರೆ ;

(ಆ) ಇವರುಗಳ ಪೈಕಿ ೨೦೧೧–೧೨, ೨೦೧೨–೧೩ ಮತ್ತು ೨೦೧೩–೧೪ ನೇ ಸಾಲುಗಳಲ್ಲಿ ಎಷ್ಟು ಜನ ಎಸ್.ಸಿ, ಎಸ್.ಟಿ, ಒಬಿಸಿ., ವಕೀಲರಿಗೆ ಕಛೇರಿ ಪ್ರಾರಂಭಿಸಲು ಸಾಲ/ಸಹಾಯ ಧನ ನೀಡಲಾಗಿದೆ; ಹಾಗೆ ನೀಡಲು ಇರುವ ಸರ್ಕಾರದ ಮಾನದಂಡಗಳೇನು ?

## ರಾಜ್ಯದಲ್ಲಿರುವ ಸಾಕು ಪ್ರಾಣಿಗಳ ಕುರಿತು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೦೬ (೪೯೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ದನಕರುಗಳು, ಕುರಿಮೇಕೆಗಳು ಇನ್ನೂ ಮುಂತಾದ ಸಾಕು ಪ್ರಾಣಿಗಳ ಸಂಖ್ಯೆ ಎಷ್ಟು; ಯಾವ ಯಾವ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟೆಷ್ಟು ಇವೆ (ಪೂರ್ಣ ವಿವರ ನೀಡುವುದು) ;

(ಆ) ಈ ಪ್ರಾಣಿಗಳ ಪಾಲನೆ ಪೋಷಣೆಗಾಗಿ ಎಷ್ಟೆಷ್ಟು ಜಮೀನನ್ನು ಯಾವ ಯಾವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೀಸಲಿಡಲಾಗಿದೆ; (ಗ್ರಾಮ ಪಂಚಾಯತಿವಾರು ವಿವರ ನೀಡುವುದು) ;

(ಇ) ಪಾಲನೆ ಪೋಷಣೆಗೆ ಹುಲ್ಲುಗಾವಲು ಎಷ್ಟಿದೆ; ಲಭ್ಯವಿಲ್ಲದ ಊರುಗಳಲ್ಲಿ ಹುಲ್ಲುಗಾವಲನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು ?

## ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) ಮತ್ತು**
**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೩೦೭(೪೫೦+೪೬೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ; ಇಲಾಖಾವಾರು ವರ್ಗೀಕರಣದೊಂದಿಗೆ ಮಾಹಿತಿ ನೀಡುವುದು ;

(ಆ) ಖಾಲಿ ಇರುವ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟು; ಯಾವ ಯಾವ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಖಾಲಿ ಹುದ್ದೆಗಳಿವೆ (ಇಲಾಖಾವಾರು ಮಾಹಿತಿ ನೀಡುವುದು) ;

(ಇ) ಸರ್ಕಾರಕ್ಕೆ ಪ್ರತಿ ಇಲಾಖೆಯು ಬ್ಯಾಕ್‌ಲಾಗ್ ಹುದ್ದೆಗಳ ವಿವರಗಳ ಪಟ್ಟಿಯನ್ನು ಸಲ್ಲಿಸಿದೆಯೇ ;



(ಈ) ಪ್ರಸ್ತುತ ಖಾಲಿ ಇರುವ ಬ್ಯಾಕ್‌ಲಾಗ್ ಹಾಗೂ ಇನ್ನಿತರೆ ಹುದ್ದೆಗಳನ್ನು ತುಂಬಲು ಗೊತ್ತುಪಡಿಸಿರುವ ಕಾಲಮಿತಿ ಎಷ್ಟು ಹಾಗೂ ತೆಗೆದುಕೊಂಡಿರುವ ಕ್ರಮಗಳೇನು ?

## ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೦೮ (೫೫೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ, ಪ್ರೋತ್ಸಾಹ ಧನವನ್ನು ನೀಡಲಾಗಿದೆಯೇ; ನೀಡಿದ್ದಲ್ಲಿ ಜಿಲ್ಲಾವಾರು ವಿವರ ನೀಡುವುದು ;

(ಆ) ಎಷ್ಟು ಪ್ರಮಾಣದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ (ವಿವರ ನೀಡುವುದು) ?

## ಚಪ್ಪೆ ರೋಗ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೦೯ (೪೭೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಾನುವಾರುಗಳಿಗೆ ಚಪ್ಪೆ ರೋಗ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಯಾವ ಯಾವ ತಾಲ್ಲೂಕುಗಳಲ್ಲಿ ಚಪ್ಪೆ ರೋಗ ಕಾಣಿಸಿಕೊಂಡಿದೆ (ಅಂಕಿ ಅಂಶ ನೀಡುವುದು) ;

(ಇ) ಚಪ್ಪೆ ರೋಗಕ್ಕೆ ಬಲಿಯಾದ ಜಾನುವಾರುಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಚಪ್ಪೆ ರೋಗದಿಂದ ಬಲಿಯಾದ ಜಾನುವಾರು ಪಾಲಕರಿಗೆ ಪರಿಹಾರ ನೀಡಲಾಗಿದೆಯೇ; ನೀಡಿದ್ದರೆ, ಪ್ರತಿ ಜಾನುವಾರಿಗೆ ಎಷ್ಟು ಪರಿಹಾರ ನೀಡಲಾಗಿದೆ ;

(ಉ) ಈಗ ಚಪ್ಪೆ ರೋಗದ ಸ್ಥಿತಿ–ಗತಿ ಹೇಗಿದೆ; ಇದನ್ನು ತಡೆಯಲು ಇಲಾಖೆ ಕೈಗೊಂಡಿರುವ ಕ್ರಮವೇನು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನಪಡಿಸಿಕೊಂಡ ನಿವೇಶನಗಳಿಗೆ ಪರಿಹಾರ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೧೦ (೪೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಸುಂಕದಕಟ್ಟೆ, ಶ್ರೀಗಂಧದ ಕಾವಲ್, 'ಸಿ' ಬ್ಲಾಕ್, ೩೨ನೇ ಅಡ್ಡರಸ್ತೆಗೆ ಹೊಂದಿಕೊಂಡಿರುವ ನಿವೇಶನಗಳನ್ನು ಬಿ.ಡಿ.ಎ ೦ಬಾವಾಗ ಸ್ವಾಧೀನಪಡಿಸಿಕೊಳ್ಳಲಾಯಿತು ;

(ಆ) ಈ ನಿವೇಶನಗಳು ಯಾರಿಗೆ ಸಂಬಂಧಿಸಿದ್ದವು (ಹೆಸರುಗಳ ಸಮೇತ ವಿವರ ನೀಡುವುದು) ;



(ಇ) ಸೈಟ್ ನಂ. ೨೧೬೩ ಒಡೆತನದ ಮಾಲೀಕರಿಗೆ ನಿವೇಶನ ಬಿಟ್ಟುಕೊಡುವಂತೆ ಸೂಚನೆ ನೀಡಲಾಗಿತ್ತೇ, ಸೂಚನೆ ನೀಡಿದ್ದರೆ, ಅದರ ಜೆರಾಕ್ಸ್ ಪ್ರತಿಯನ್ನು ನೀಡುವುದು ;

(ಈ) ಇವರಿಗೆ ಪರ್ಯಾಯವಾಗಿ ನಿವೇಶನ ನೀಡಲಾಗಿದೆಯೇ; ಅಥವಾ ಪರಿಹಾರವನ್ನು ನೀಡಲಾಗಿದೆಯೇ; ನೀಡಿಲ್ಲದಿದ್ದರೆ, ಅಂದಿನಿಂದ ಇಂದಿನವರೆವಿಗೂ ನೀಡದೆ ಇರಲು ಕಾರಣವೇನು ;

(ಉ) ರಸ್ತೆ ಅಗಲೀಕರಣ ಮಾಡಿಕೊಳ್ಳಲು ಭೂಮಿಯನ್ನು ನೀಡಿದ ಯಾರ‍್ಯಾರಿಗೆ ಪರಿಹಾರವನ್ನು ನೀಡಲಾಗಿದೆ; ಇನ್ನೂ ಯಾರು ಯಾರಿಗೆ ಪರಿಹಾರವನ್ನು ನೀಡಿಲ್ಲ ?

## ಬೆಂಗಳೂರು ನಗರದಲ್ಲಿ ಬೆಂಕಿ ಅವಘಡಗಳು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) ಮತ್ತು ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ):–**

೩೧೧(೪೮೦ & ೫೪೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩ ರಿಂದ ಇದುವರೆವಿಗೂ ಬೆಂಗಳೂರು ಮಹಾನಗರದಲ್ಲಿ ಎಷ್ಟು ಬೆಂಕಿ ಅವಘಡಗಳು ಸಂಭವಿಸಿವೆ; ಯಾವ ಯಾವ ಸ್ಥಳಗಳಲ್ಲಿ ಬೆಂಕಿ ಅವಘಡ ಸಂಭವಿಸಿವೆ (ವಿವರ ನೀಡುವುದು) ;

(ಆ) ವಾಣಿಜ್ಯ ಮಳಿಗೆಗಳು ಹಾಗೂ ಅಪಾರ್ಟ್‌ಮೆಂಟ್ ಇಂತಹ ಸ್ಥಳಗಳಲ್ಲಿ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆಯಿಂದಿರಲು ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳೇನು ?

## ಮರಳು ಗಣಿಗಾರಿಕೆಗೆ ಅನುಮತಿ ಮತ್ತು ವಿಧಿಸಿರುವ ದಂಡ.

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೧೨ (೪೫೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ರಲ್ಲಿ ಸರ್ಕಾರ ಅಧಿಕೃತವಾಗಿ ಎಷ್ಟು ಲೋಡ್ ಮರಳು ತೆಗೆಯಲು ಅನುಮತಿ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡುವಾಗ ಸೀಜ್ ಮಾಡಿದ ಸಂದರ್ಭದಲ್ಲಿ ದಂಡದ ರೂಪದಲ್ಲಿ ಸಂಗ್ರಹಿಸಿರುವ ಹಣವೆಷ್ಟು ?

## ಬೆಳಗಾವಿ ಸುವರ್ಣಸೌಧದಲ್ಲಿ ಸಚಿವ ಸಂಪುಟದ ಸಭೆಗಳು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೧೩ (೪೮೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಸುವರ್ಣಸೌಧ ಸದ್ಬಳಕೆಯಾಗದೇ ಕೇವಲ ಕಾಟಾಚಾರಕ್ಕಾಗಿ ಅಧಿವೇಶನಗಳನ್ನು ನಡೆಸಲಾಗುತ್ತಿದೆ ಎಂದು ಸಾರ್ವಜನಿಕರು ಟೀಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಂಗಳೂರಿನಲ್ಲಿಯೇ ಕೇಂದ್ರೀಕೃತವಾಗಿರುವ ಅನೇಕ ಕಛೇರಿಗಳನ್ನು ಬೆಳಗಾವಿ ಸುವರ್ಣಸೌಧಕ್ಕೆ ಸ್ಥಳಾಂತರಿಸಲಾಗುವುದೇ; ಹಾಗಿದ್ದಲ್ಲಿ, ಯಾವಾಗ ;



(ಇ) ಪ್ರತಿ ತಿಂಗಳಲ್ಲಿ ಒಂದು ಸಲ ಬೆಳಗಾವಿ ಸುವರ್ಣಸೌಧದಲ್ಲಿ "ಸಚಿವ ಸಂಪುಟ ಸಭೆ" ಮತ್ತು "ಜನ ಸಂಪರ್ಕ" ಸಭೆಗಳನ್ನು ಏರ್ಪಡಿಸಿ ಕೇವಲ ಉತ್ತರ ಕರ್ನಾಟಕಕ್ಕೆ ಸೀಮಿತವಾದ ವಿಷಯಗಳನ್ನು ಇತ್ಯರ್ಥಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದೇ ;

(ಈ) ಸುವರ್ಣಸೌಧದ ಮುಂದೆ "ವೀರರಮಣಿ ಕಿತ್ತೂರು ರಾಣಿ ಚೆನ್ನಮ್ಮ", "ಸಂಗೊಳ್ಳಿ ರಾಯಣ್ಣ" ಮತ್ತು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಗಳನ್ನು ಸ್ಥಾಪಿಸಲಾಗುವುದೆ; ಹಾಗಿದ್ದಲ್ಲಿ ಯಾವಾಗ ;

(ಉ) ಅಧಿವೇಶನಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಬೆಳಗಾವಿ ಸುವರ್ಣಸೌಧದ ಹತ್ತಿರ "ಶಾಸಕರ ಭವನ" ಮತ್ತು " ಹೋಟೆಲ್" ನಿರ್ಮಿಸಲಾಗುವುದೆ; ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ?

## ರಸ್ತೆಗಳ ಅಗಲೀಕರಣ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೧೪ (೪೫೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರದಲ್ಲಿನ ಚಿಕ್ಕ ಚಿಕ್ಕ ರಸ್ತೆಗಳು ಮತ್ತು ವಾಹನ ಸಂಚಾರ ದಟ್ಟಣೆಯಿಂದಾಗಿ ನಾಗರೀಕರಿಗೆ ತೀವ್ರ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಮುಖ ರಸ್ತೆಗಳ ಅಗಲೀಕರಣ, ವರ್ತುಲ ರಸ್ತೆ ಮತ್ತು ಮೇಲು–ಸೇತುವೆಗಳನ್ನು ನಿರ್ಮಾಣ ಮಾಡಲಾಗುವುದೇ (ವಿವರಗಳನ್ನು ನೀಡುವುದು) ;

(ಇ) ಬೆಳಗಾವಿಯಲ್ಲಿ ಪಾದಚಾರಿಗಳಿಗಾಗಿ ಸ್ಕೈ ವಾಕ್‌ಗಳನ್ನು ನಿರ್ಮಿಸಲಾಗುವುದೆ ?

## ಬೃಹತ್ ಕೈಗಾರಿಕೆಗಳು ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳೀಯರು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೫ (೪೫೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಕಾರ್ಖಾನೆಗಳಿಗೆ ನೀಡಲಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು (ಕಾರ್ಖಾನೆವಾರು ವಿವರಗಳನ್ನು ನೀಡುವುದು) ;

(ಇ) ಸದರಿ ಕಾರ್ಖಾನೆಗಳು ನಿರ್ಮಿಸಿಕೊಂಡಿರುವ ವಿಸ್ತೀರ್ಣ ಎಷ್ಟು (ಕಾರ್ಖಾನೆವಾರು ವಿವರಗಳನ್ನು ನೀಡುವುದು) ;

(ಈ) ಸದರಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯರ ಸಂಖ್ಯೆಗಳನ್ನು ನೀಡುವುದು ;



(ಉ) ಡಾ॥ ಸರೋಜಿನಿ ಮಹಿಷಿ ವರದಿ ಪ್ರಕಾರ ಕೊಪ್ಪಳ ಜಿಲ್ಲೆಯಲ್ಲಿರುವ ಎಲ್ಲಾ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಪ್ರಾತಿನಿಧ್ಯ ನೀಡಲಾಗಿದೆಯೇ ;

(ಊ) ಇಲ್ಲವಾದಲ್ಲಿ, ಸರ್ಕಾರ ಈ ಕುರಿತು ಕೈಗೊಳ್ಳುವ ಕ್ರಮಗಳೇನು ?

## ಜ್ಯೋತಿ ಸಂಜೀವಿನಿ ಯೋಜನೆ ಜಾರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೬ (೪೫೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜ್ಯೋತಿ ಸಂಜೀವಿನಿ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ ;

(ಆ) ಈ ಯೋಜನೆಯ ರೂಪ ರೇಷೆಗಳೇನು ;

(ಇ) ಸದರಿ ಯೋಜನೆಯ ಸದ್ಯದ ಪ್ರಗತಿ ಯಾವ ಹಂತದಲ್ಲಿದೆ ;

(ಈ) ಈ ಯೋಜನೆಯಲ್ಲಿ ಸರ್ಕಾರಿ ನೌಕರರ ಕುಟುಂಬದವರ ಮಾಹಿತಿಯನ್ನು ಗಣಕೀಕರಿಸಲು ಹೆಚ್.ಆರ್.ಎಂ.ಎಸ್.ನಲ್ಲಿ ಅವಕಾಶವಿಲ್ಲದ ಕುರಿತು ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಈ ಯೋಜನೆಯನ್ನು ಇದುವರೆಗೂ ಅನುಷ್ಠಾನಗೊಳಿಸದೇ ಇರುವ ಇಲಾಖೆಗಳು ಯಾವುವು; ಅನುಷ್ಠಾನಕ್ಕೆ ಇರುವ ತೊಂದರೆಗಳೇನು ?

## ಕೈಗಾರಿಕೆಗಳ ಸ್ಥಾಪನೆ ಮತ್ತು ಉದ್ಯಮಿಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೭ (೪೬೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಲಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಣ್ಣ ಹಾಗೂ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಸ್ಥಾಪನೆಯಾಗಿವೆಯೇ ;

(ಆ) ಎರಡೂ ಜಿಲ್ಲೆಗಳಲ್ಲಿ ಕೈಗಾರಿಕೆ ಸ್ಥಾಪಿಸಲು ಆಸಕ್ತಿ ವ್ಯಕ್ತಪಡಿಸಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;

(ಇ) ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಹೆಚ್ಚಿಸಲು ಯಾವ ಯಾವ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ ?

## ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ನೀಡಿರುವ ಉತ್ತೇಜನ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೮ (೪೫೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ನೀಡಿದೆ ;



(ಆ) ಕಳೆದ ೩ ವರ್ಷಗಳಿಂದ ಈ ಜಿಲ್ಲೆಗಳ ಸಣ್ಣ ಕೈಗಾರಿಕಾ ಘಟಕವನ್ನು ಸ್ಥಾಪಿಸುವ ಸಲುವಾಗಿ ಉತ್ತೇಜಿಸಲು ಸರ್ಕಾರವು ಎಷ್ಟು ಹಣವನ್ನು ಯಾವ ಯಾವ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ. ಹಾಗೂ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಯೋಜನೆಗಳನ್ನು ರೂಪಿಸಿದೆ ;

(ಇ) ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಯಾವ ಯಾವ ಸ್ಥಳಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ?

## ಪಶು ಚಿಕಿತ್ಸಾಲಯಗಳಲ್ಲಿ ವೈದ್ಯರ ಕೊರತೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೯ (೪೫೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಒಟ್ಟು ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಎಲ್ಲಾ ಚಿಕಿತ್ಸಾಲಯಗಳಲ್ಲಿ ಮಂಜೂರಾದ, ಭರ್ತಿ ಇರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು ;

(ಇ) ಜಿಲ್ಲೆಯಲ್ಲಿ ಪಶು ವೈದ್ಯರ ಕೊರತೆ ಏನಾದರೂ ಇದೆಯೆ ;

(ಈ) ಇದ್ದಲ್ಲಿ, ಕೊರತೆಯನ್ನು ನಿವಾರಿಸಲು ಸರ್ಕಾರ ಇದುವರೆಗೂ ಕೈಗೊಂಡ ಕ್ರಮಗಳೇನು ?

## ನಕ್ಸಲ್ ಬಾಧಿತ ಪ್ರದೇಶಗಳ ಅಭಿವೃದ್ಧಿ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೦ (೫೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯ ನಕ್ಸಲ್ ಬಾಧಿತ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಮೂಲ ಸೌಕರ್ಯ ಕಲ್ಪಿಸಲು ೨೦೧೨–೧೩, ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ;

(ಆ) ಹೀಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಪೂರ್ಣಗೊಳ್ಳದೆ ಇದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು ?

## ಮರಳು ಸಮಸ್ಯೆಗೆ ಪರಿಹಾರ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೧ (೪೬೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯವ್ಯಾಪಿ ಮರಳು ಕೊರತೆಯಿಂದಾಗಿ ನಿರ್ಮಾಣ ಕಾರ್ಯಗಳು ಸ್ಥಗಿತಗೊಂಡು, ಲಕ್ಷಾಂತರ ಕುಟುಂಬಗಳು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಮಸ್ಯೆ ಪರಿಹಾರಕ್ಕೆ ಕೈಗೊಂಡಿರುವ ಕ್ರಮಗಳು ಏನು ;



(ಇ) ಮರಳು ಸಮಸ್ಯೆ ಪರಿಹಾರಕ್ಕೆ ಇನ್ನೂ ಎಷ್ಟು ದಿನಗಳು ಬೇಕಾಗುತ್ತದೆ ?

## ಖಾಸಗಿ ಉಷ್ಣ ವಿದ್ಯುತ್ ಸ್ಥಾವರ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೨ (೪೬೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ದಿ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯಲ್ಲಿ ೨೦೦೩ರಲ್ಲಿ ೧೪.೫ ಮೆಘಾವ್ಯಾಟ್, ೨೦೦೬ ರಲ್ಲಿ ೧೫.೫ ಮೆಘಾವ್ಯಾಟ್, ಹಾಗೂ ೨೦೧೦ ರಲ್ಲಿ ೩೪.೫ ಮೆಘಾವ್ಯಾಟ್, ವಿದ್ಯುತ್ ಉತ್ಪಾದಿಸಲು ಪ್ರಾರಂಭಿಸಲಾಗಿದೆಯೇ ;

(ಆ) ೨೦೦೩, ೨೦೦೬ ಹಾಗೂ ೨೦೧೦ರಲ್ಲಿ ಪ್ರಾರಂಭಿಸಲಾದ ಉಷ್ಣ ವಿದ್ಯುತ್ ಸ್ಥಾವರಕ್ಕೆ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯಕ್ಕೆ ಸಲ್ಲಿಸಲಾದ E.I.A. (Environment Impact Assessment) ವರದಿಗಳ ವಿವರ ನೀಡುವುದು ;

(ಇ) ಇದೇ ವರ್ಷಗಳಲ್ಲಿ ಪ್ರಾರಂಭಿಸಲಾದ ಉಷ್ಣ ವಿದ್ಯುತ್ ಸ್ಥಾವರ ಕಾರ್ಯಾರಂಭ ಮಾಡಲು ನೀಡಲಾದ ಒಪ್ಪಿಗೆ ಪತ್ರಗಳ ಪ್ರತಿ ನೀಡುವುದು ;

(ಈ) ಸದರಿ ವರ್ಷಗಳಲ್ಲಿ ಪ್ರಾರಂಭಿಸಲಾಗಿರುವ ಉಷ್ಣ ವಿದ್ಯುತ್ ಸ್ಥಾವರ ಪ್ರಾರಂಭಿಸಲು Public hearing ಯಾವ ದಿನಾಂಕದಂದು ಯಾರ ನೇತೃತ್ವದಲ್ಲಿ ನಡೆಸಲಾಗಿದೆ (ವಿವರ ನೀಡುವುದು) ?

## ಲೋಕಾಯುಕ್ತ ದಾಳಿ ಪ್ರಕರಣಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೩ (೫೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಯಾವ ಯಾವ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಇಲಾಖೆಯು ಶಿಸ್ತುಬದ್ಧ ಕ್ರಮ (ಸಸ್ಪೆಂಡ್) ಕೈಗೊಳ್ಳಲು ಶಿಫಾರಸ್ಸು ಮಾಡಿದೆ (ಅಧಿಕಾರಿಯ ಹೆಸರು ಮತ್ತು ಪದನಾಮ ತಿಳಿಸುವುದು) ;

(ಆ) ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಇಲಾಖೆಯು ಶಿಸ್ತು ಬದ್ಧ ಕ್ರಮ (ಸಸ್ಪೆಂಡ್) ಜರುಗಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮ ವಿವರ ನೀಡುವುದು ;

(ಇ) ಲೋಕಾಯುಕ್ತ ಇಲಾಖೆಯು ಸಸ್ಪೆಂಡ್‌ಗೆ ಶಿಫಾರಸ್ಸು ಮಾಡಿದ್ದರೂ ಸಸ್ಪೆಂಡ್ ಆಗದೇ ಆಯಾಕಟ್ಟಿನ ಜಾಗದ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯ ಹೆಸರು ಮತ್ತು ಪದನಾಮ ತಿಳಿಸುವುದು ;

(ಈ) ಈ ರೀತಿ ಸರ್ಕಾರ ಎರಡು ನೀತಿಯನ್ನು ಅನುಸರಿಸಲು ಕಾರಣವೇನು ?



## ದಿ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯ ಉತ್ಪಾದನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೪ (೪೯೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ದಿ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ಪ್ರತಿ ದಿನಕ್ಕೆ ಸರಾಸರಿ ಎಷ್ಟು ಟನ್ ಕಾಗದ ಉತ್ಪಾದಿಸುತ್ತಿದೆ (ಕಳೆದ ಹತ್ತು ವರ್ಷಗಳ, ತಿಂಗಳವಾರು ಕಾಗದ ಉತ್ಪಾದನೆಯ ವಿವರ ನೀಡುವುದು) ;

(ಆ) ಸದರಿ ಕಾರ್ಖಾನೆ ಪ್ರತಿ ದಿನಕ್ಕೆ ಸರಾಸರಿ ಎಷ್ಟು ಟನ್ ಕಚ್ಚಾಮರ–ಮುಟ್ಟು ಬಂಬುಗಳನ್ನು ಬಳಸುತ್ತಿದೆ; ಕಳೆದ ಹತ್ತು ವರ್ಷಗಳ ತಿಂಗಳವಾರು ಟನ್ ಕಚ್ಚಾ ಮಾಲುಗಳ ವಿವರ ನೀಡುವುದು ;

(ಇ) ಪ್ರತಿಯೊಂದು ಮರಗಳ ಟನ್ ಬಳಕೆಯಿಂದ ಎಷ್ಟು ಕ್ವಿಂಟಾಲ್‌ಗಳ ಕಾಗದ ಉತ್ಪಾದನೆಯಾಗುತ್ತಿದೆ (ಸಂಪೂರ್ಣ ವಿವರ ನೀಡುವುದು) ;

(ಈ) ಮರದ ಯಾವ ಕಚ್ಚಾ ಮಾಲು ಹೆಚ್ಚು ಕಾಗದ ಉತ್ಪಾದಿಸುತ್ತದೆ (ಅವುಗಳ ಸಂಪೂರ್ಣ ವಿವರ ನೀಡುವುದು) ?

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೫ (೫೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಇರುವ ಕೊಳಚೆ ಪ್ರದೇಶಗಳೆಷ್ಟು, ಈ ಕೊಳಚೆ ಪ್ರದೇಶಗಳು ಯಾವ ಯಾವ ವಾರ್ಡ್‌ನ ವ್ಯಾಪ್ತಿಯಲ್ಲಿವೆ ;

(ಆ) ಈ ಪ್ರದೇಶಗಳಿಗೆ ಕಳೆದ ಹತ್ತು ವರ್ಷಗಳಿಂದ ವಿವಿಧ ಯೋಜನೆಯಡಿಯಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ, ಮೋರಿ, ವಿದ್ಯುತ್, ಮನೆಗಳ ಸೌಲಭ್ಯ ಕಲ್ಪಿಸಲಾಗಿದೆಯೇ (ವಿವರ ನೀಡುವುದು) ;

(ಇ) ಈ ಕಾಮಗಾರಿಗಳಿಗೆ ಟೆಂಡರ್ ಕರೆದ ಕಾಮಗಾರಿಗಳೆಷ್ಟು, ಟೆಂಡರ್ ಕರೆಯದೇ ಕೆ.ಆರ್.ಐ.ಡಿ.ಎಲ್ ನೀಡಿದ ಕಾಮಗಾರಿಗಳೆಷ್ಟು ?

## ಗಣಿಗಾರಿಕೆ ಪರವಾನಗಿಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೬ (೪೯೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೨೦೧೫ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯಲ್ಲಿ ಗಣಿಗಾರಿಕೆಗಾಗಿ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು ಎಷ್ಟು ;

(ಆ) ಇವುಗಳಲ್ಲಿ ಮಂಜೂರಾಗಿರುವ ಗಣಿಗಾರಿಕೆ ಪರವಾನಗಿಗಳು ಎಷ್ಟು; ಎಲ್ಲೆಲ್ಲಿ ಪರವಾನಗಿಗಳನ್ನು ನೀಡಲಾಗಿದೆ (ವಿವರ ನೀಡುವುದು) ?

## ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೭ (೪೭೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಖಾಲಿ ಇರುವ ಪೊಲೀಸ್ ಸಿಬ್ಬಂದಿಗಳೆಷ್ಟು; ಇದರಲ್ಲಿ (ಕೆ.ಎಸ್.ಆರ್.ಪಿ. ಪೊಲೀಸ್, ಸಿವಿಲ್ ಪೊಲೀಸ್ ಮಾಹಿತಿಯನ್ನು ನೀಡುವುದು) ;



(ಆ) ಖಾಲಿ ಇರುವ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳೆಷ್ಟು (ಮಾಹಿತಿಯನ್ನು ನೀಡುವುದು) ;

(ಇ) ಈ ಎಲ್ಲಾ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಲು ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ;

(ಈ) ಕೇಂದ್ರ ಗೃಹ ಖಾತೆಯ ಮಾರ್ಗಸೂಚಿಯನ್ವಯ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ರಾಜ್ಯದಲ್ಲಿರುವ ಪೊಲೀಸ್ ಬಲ ಕಡಿಮೆ ಎನ್ನಿಸುವುದಿಲ್ಲವೇ ;

(ಉ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮ ಯಾವುದು ?

## ದೇವಸ್ಥಾನಗಳಿಗೆ ಅನುದಾನ ಬಿಡುಗಡೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮ (೪೬೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ದೇವಸ್ಥಾನದ ಅಭಿವೃದ್ಧಿ ಮತ್ತು ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಈ ಅನುದಾನದಲ್ಲಿ ಪ್ರಸ್ತುತ ಯಾವ ದೇವಸ್ಥಾನದ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದೆ (ಮಾಹಿತಿ ನೀಡುವುದು) ?

## ಖಾಲಿ ಇರುವ ಅಧಿಕಾರಿ ಮತ್ತು ಅಧಿಕಾರೇತರ ಹುದ್ದೆಗಳ ಭರ್ತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೯ (೪೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲ್ಲಾ ಇಲಾಖೆಯಲ್ಲಿ ಖಾಲಿ ಇರುವ ಕೆ.ಎ.ಎಸ್., ಎಫ್.ಡಿ.ಎ. ಮತ್ತು ಎಸ್.ಡಿ.ಎ. ಹುದ್ದೆಗಳೆಷ್ಟು (ಇಲಾಖಾವಾರು ಮಾಹಿತಿ ನೀಡುವುದು) ;

(ಆ) ಇಷ್ಟು ಭಾರೀ ಪ್ರಮಾಣದಲ್ಲಿ ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ಯಾವಾಗ ಭರ್ತಿ ಮಾಡುತ್ತದೆ ;

(ಇ) ನೇಮಕಾತಿಯನ್ನು ಮಾಡಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಯೇನು ;

(ಈ) ನೇಮಕಾತಿಯನ್ನು ಮಾಡದೇ ಇರುವುದರಿಂದ ಸರ್ಕಾರಿ ಕೆಲಸಗಳಲ್ಲಿ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ?

## ಅಕ್ರಮ ಮರಳು ಸಾಗಣೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೦ (೪೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮ ಯಾವುದು ;

(ಇ) ನದಿಗಳಲ್ಲಿ ಮತ್ತು ಭೂ ಪ್ರದೇಶದಲ್ಲಿ ಮರಳು ತೆಗೆಯುವುದು ಮತ್ತು ಸಾಗಾಟಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಕಾನೂನು ಇದೆಯೇ ;

(ಈ) ಇದ್ದಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಏಕರೂಪದ್ದಾಗಿರುತ್ತದೆಯೇ ಅಥವಾ ಭಿನ್ನವಾಗಿರುತ್ತದೆಯೋ ?

## ರೈಲ್ವೇ ಹಳಿ ಮೇಲ್ಸೇತುವೆ ನಿರ್ಮಾಣ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೧ (೪೭೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ನೂತನ ಬಸ್ ನಿಲ್ದಾಣದ ಹತ್ತಿರ ಹಾದು ಹೋಗಿರುವ ರೈಲ್ವೇ ಹಳಿಗೆ ಮೇಲ್ಸೇತುವೆ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ನಗರದ ಎನ್.ಆರ್. ಸರ್ಕಲ್‌ನಿಂದ ನೂತನ ಬಸ್ ನಿಲ್ದಾಣದವರೆಗೆ ಅಧಿಕ ವಾಹನ ದಟ್ಟಣೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ರಸ್ತೆಯನ್ನು ಅಗಲೀಕರಣ ಮಾಡಲು ಕೈಗೊಂಡಿರುವ ಕ್ರಮಗಳೇನು ;

(ಇ) ಇಲ್ಲಿನ ರೈಲ್ವೇ ಸ್ಟೇಷನ್‌ನಿಂದ ಡೇರಿ ವೃತ್ತದವರೆಗೆ ಬೀದಿ ದೀಪಗಳಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಬೀದಿ ದೀಪ ಅಳವಡಿಸಲು ಕೈಗೊಂಡಿರುವ ಕ್ರಮಗಳೇನು ?

## ಖಾಲಿಯಿರುವ ಹುದ್ದೆಗಳ ಭರ್ತಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೨ (೪೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ಸರ್ಕಾರಿ ಇಲಾಖೆಗಳ ಕಛೇರಿಗಳಲ್ಲಿ ಮಂಜೂರಾದ ಇಲಾಖಾವಾರು ಹುದ್ದೆಗಳೆಷ್ಟು ;

(ಆ) ಎಲ್ಲಾ ಇಲಾಖೆಗಳ ಕಛೇರಿಗಳಲ್ಲಿ ಹಾಲಿ ಭರ್ತಿ ಇರುವ ಹುದ್ದೆಗಳೆಷ್ಟು ;

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ;

(ಈ) ಪ್ರಮುಖ ಇಲಾಖೆಗಳಾದ ಆರೋಗ್ಯ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಪಶು ಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಅಭಿವೃದ್ಧಿ ಕುಂಠಿತವಾಗಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನಗರಗಳಲ್ಲಿ ನಾಯಿಗಳ ದಾಳಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೩ (೪೭೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಬೀದಿ ನಾಯಿಗಳ ದಾಳಿಗೊಳಗಾದವರ ಸಂಖ್ಯೆ ಎಷ್ಟು ;



(ಆ) ಹೀಗೆ ದಾಳಿಗೊಳಗಾದವರಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು ;

(ಇ) ಹಾಸನ ಜಿಲ್ಲೆಯಲ್ಲಿ ಬೀದಿ ನಾಯಿಗಳ ದಾಳಿಯಿಂದಾದ ಪ್ರಕರಣಗಳೆಷ್ಟು ಹಾಗೂ ನೀಡಿರುವ ಪರಿಹಾರವೆಷ್ಟು ;

(ಈ) ಬೀದಿ ನಾಯಿಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಸ್ತೆ ಉಬ್ಬುಗಳ ನಿರ್ಮಾಣ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೪ (೪೬೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ನಗರದ ಪ್ರಮುಖ ರಸ್ತೆಗಳಿಗೆ ಉಬ್ಬುಗಳನ್ನು ಹಾಕದೆ ರಸ್ತೆಗಳು ಮೃತ್ಯು ಕೂಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಮೂರು ವರ್ಷಗಳಿಂದ ಈ ನಗರ ವ್ಯಾಪ್ತಿಯಲ್ಲಿ ಸಂಭವಿಸಿರುವ ಅಪಘಾತಗಳೆಷ್ಟು ;

(ಇ) ಹಾಸನದ ಹೊಸ ಬಸ್ ನಿಲ್ದಾಣದ ಮುಂಭಾಗ ಎಂ.ಜಿ.ರಸ್ತೆ, ಡೈರಿ ವೃತ್ತದಿಂದ ಸಾಲಗಾಮೆ ರಸ್ತೆವರೆಗಿನ ರಿಂಗ್ ರಸ್ತೆ, ನಗರದ ಒಳ ಭಾಗದಲ್ಲಿರುವ ಪ್ರಮುಖ ರಸ್ತೆಗಳು, ಆರ್.ಸಿ.ರಸ್ತೆಗಳಲ್ಲಿ ರಸ್ತೆ ಉಬ್ಬು ಅಳವಡಿಸಿ ಅಪಘಾತ ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು :

(ಈ) ಶಾಲಾ/ಕಾಲೇಜು ಮಕ್ಕಳು ವಾಹನ ಚಾಲನೆ ಪರವಾನಗಿ ಇಲ್ಲದೇ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ಓಡಿಸಿ ಸಾರ್ವಜನಿಕರಲ್ಲಿ ಭಯದ

ವಾತಾವರಣ ಉಂಟು ಮಾಡುವುದನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು ?

## ಸಾರ್ವಜನಿಕ ಕುಡಿಯುವ ನೀರು ಸರಬರಾಜು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೫ (೪೭೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯಲ್ಲಿರುವ ಸಾರ್ವಜನಿಕ ಕುಡಿಯುವ ನೀರಿನ ಟ್ಯಾಂಕುಗಳು ಎಷ್ಟು ;

(ಆ) ಈ ಟ್ಯಾಂಕುಗಳ ಪೈಕಿ ೧೦ ವರ್ಷಕ್ಕಿಂತ ಹಳೆಯದಾದ ಟ್ಯಾಂಕುಗಳೆಷ್ಟು ಮತ್ತು ಶಿಥಲಗೊಂಡಿರುವ ಟ್ಯಾಂಕುಗಳೆಷ್ಟು ;

(ಇ) ಶಿಥಿಲಗೊಂಡಿರುವ ಟ್ಯಾಂಕುಗಳನ್ನು ತೆರವುಗೊಳಿಸಿ ಹೊಸ ಟ್ಯಾಂಕುಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು ?

## ಸಿ.ಡಿ.ಪಿ. ಯೋಜನೆಯ ಪರಿಷ್ಕೃತ ಯೋಜನೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೩೩೬ (೪೮೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ. ಯೋಜನೆಯ ಪರಿಷ್ಕೃತ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ;



(ಆ) ಇನ್ನೂ ಜಾರಿಗೊಳಿಸದಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು; ಇದಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯಗಳಲ್ಲಿ ಯಾವುದಾದರೂ ವ್ಯಾಜ್ಯವಿದೆಯೇ; ಇದ್ದಲ್ಲಿ ನ್ಯಾಯಾಲಯದ ನಿರ್ದೇಶನವೇನು; ಎಂದಿನಿಂದ ಜಾರಿಗೊಳಿಸಲಾಗುವುದು ?

## ಅಪರಾಧ ಪ್ರಕರಣಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೩೩೭ (೪೭೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಅಪಹರಣ, ಕಳ್ಳತನ, ಸುಲಿಗೆ, ದರೋಡೆ, ಕೊಲೆ, ಲೈಂಗಿಕ ಕಿರುಕುಳ, ಅತ್ಯಾಚಾರ, ಆತ್ಮಹತ್ಯೆ, ರಸ್ತೆ ಅಪಘಾತ ಮುಂತಾದ ಪ್ರಮುಖ ಅಪರಾಧಗಳ ವಿವರ ನೀಡುವುದು (ಅಪರಾಧವಾರು, ಜಿಲ್ಲಾವಾರು ವಿವರ ನೀಡುವುದು) ;

(ಆ) ಸದರಿ ಅವಧಿಯಲ್ಲಿ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದ ಪ್ರಕರಣಗಳ ಸಂಖ್ಯೆ ಹೆಚ್ಚಾಗಿರುವುದಕ್ಕೆ ಕಾರಣಗಳೇನು; ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ, ಎಷ್ಟು ಮೊಕದ್ದಮೆಗಳನ್ನು ಹೂಡಲಾಗಿದೆ; ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆಯೇ; ಶಿಕ್ಷೆಯ ಪ್ರಮಾಣವೇನು (ಜಿಲ್ಲಾವಾರು ವಿವರ ನೀಡುವುದು) ?

## ಪಶು ಸಂಗೋಪನಾ ವಿಶ್ವವಿದ್ಯಾಲಯಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೩೩೮ (೪೭೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪಶು ಸಂಗೋಪನಾ ಇಲಾಖೆಯ ಅಡಿಯಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳು ಎಷ್ಟು; ಇವುಗಳಿಗೆ ಸಂಬಂಧಿಸಿದ ಕಾಲೇಜು, ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿವರ ನೀಡುವುದು ;

(ಆ) ಇಲ್ಲಿ ನೀಡಲಾಗುತ್ತಿರುವ ಪದವಿಗಳಿಗೆ ಕೇಂದ್ರ ಸರ್ಕಾರದ ಯು.ಜಿ.ಸಿ.ಯ ಮಾನ್ಯತೆ ದೊರೆತಿದೆಯೇ; ಇಲ್ಲದಿದ್ದಲ್ಲಿ, ಇಂತಹ ಪದವಿಯನ್ನು ಪಡೆದ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಇಬ್ಬರು ಐ.ಎ.ಎಸ್. ಅಧಿಕಾರಿಗಳ ವಿರುದ್ಧದ ವಿಚಾರಣೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೩೩೯ (೪೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನ "ಬಿ" ಖರಾಬು ಭೂಮಿಯ ಅಕ್ರಮಕ್ಕೆ ಸಂಬಂಧಪಟ್ಟಂತೆ ಮತ್ತು ಚಾಮರಾಜನಗರದ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಗ್ರಾಮದ ಇನಾಂ ಮತ್ತು ಅರಣ್ಯ ಭೂಮಿಗೆ ಸಂಬಂಧಿಸಿದಂತೆ, ಅಕ್ರಮವೆಸಗಿದ ಅಂದಿನ



ಜಿಲ್ಲಾಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭವಾಗಿದೆಯೇ ;

(ಆ) ಅವರುಗಳ ಮೇಲಿನ ಅಕ್ರಮಗಳ ಆರೋಪದ ವಿವರ ನೀಡುವುದು; ವಿಚಾರಣೆಯ ಹಂತದ ವಿವರಗಳನ್ನು ನೀಡುವುದು ಮತ್ತು ಆ ಅಧಿಕಾರಿಗಳು ಹಾಲಿ ಯಾವ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ?

## ಅರ್ಕಾವತಿ ಬಡಾವಣೆಯ ಡಿನೋಟಿಫಿಕೇಷನ್

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೩೪೦ (೪೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರ್ಕಾವತಿ ಬಡಾವಣೆ ನಿರ್ಮಾಣ ಮಾಡಲು ಪ್ರಾಥಮಿಕ ಅಧಿಸೂಚನೆ ಯಾವಾಗ ಹೊರಡಿಸಲಾಯಿತು; ಸದರಿ ಅಧಿಸೂಚನೆಯಂತೆ ಎಷ್ಟು ಎಕರೆ ಪ್ರದೇಶವನ್ನು ಅಧಿಸೂಚನೆಯಲ್ಲಿ ಸೇರಿಸಲಾಯಿತು (ಗ್ರಾಮವಾರು ಭೂಸ್ವಾಧೀನದ ವಿವರ ನೀಡುವುದು) ;

(ಆ) ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಈ ತಹಲ್‌ವರೆಗೆ ಅಧಿಸೂಚನೆಯಿಂದ ಕೈಬಿಟ್ಟ ಜಮೀನುಗಳ (ಡಿ ನೋಟಿಫಿಕೇಷನ್) ವರ್ಷವಾರು, ಗ್ರಾಮವಾರು, ವಿಸ್ತೀರ್ಣವಾರು ವಿವರ ನೀಡುವುದು; ಅಧಿಸೂಚನೆಯಿಂದ ಕೈಬಿಟ್ಟ ಪ್ರತಿ ಪ್ರಕರಣದ ಸಂದರ್ಭದ ಇಲಾಖಾ ಸಚಿವ, ಮುಖ್ಯಮಂತ್ರಿ ಹಾಗೂ ಬಿ.ಡಿ.ಎ. ಆಯುಕ್ತರ ಹೆಸರನ್ನು ನೀಡುವುದು ;

(ಇ) ಅರ್ಕಾವತಿ ಬಡಾವಣೆಯಲ್ಲಿ ಒಟ್ಟು ಎಷ್ಟು ಜನ ಫಲಾನುಭವಿಗಳಿಗೆ ಈ ತಹಲ್‌ವರೆಗೆ ನಿವೇಶನ ನೀಡಿ ಸಂಬಂಧಿಸಿದವರಿಗೆ ಖಾತಾ

ಕಂದಾಯ ಮಾಡಿಕೊಡಲಾಗಿದೆ ಮತ್ತು ಎಷ್ಟು ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ ;

(ಈ) ಈ ಬಡಾವಣೆಯ ಅಧಿಸೂಚನೆಯಿಂದ ಕೈಬಿಟ್ಟ ಭೂಮಿಯ ಬಗೆಗಿನ ಅವ್ಯವಹಾರದ ಬಗ್ಗೆ ಸರ್ಕಾರ ಯಾವುದಾದರೂ ತನಿಖೆಯನ್ನು ಕೈಗೊಂಡಿದೆಯೇ (ಕೈಗೊಂಡಿದ್ದಲ್ಲಿ, ತನಿಖಾಧಿಕಾರಿಯ ಹೆಸರು ಮತ್ತು ತನಿಖೆಯ ಪ್ರಗತಿಯ ವರದಿಯನ್ನು ನೀಡುವುದು) ?

## ಕೈಗಾರಿಕೆಗಳ ಸ್ಥಾಪನೆಗಾಗಿ ಮಂಜೂರು ಮಾಡಲಾದ ಭೂಮಿ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೪೧ (೪೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳ ಅವಧಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವತಿಯಿಂದ ಎಷ್ಟು ಕೈಗಾರಿಕೆಗಳಿಗೆ ಭೂಮಿ ಮಂಜೂರು ಮಾಡಲಾಗಿದೆ (ಅದರ ವಿವರ ನೀಡುವುದು) ;

(ಆ) ಮಾಡಿದ್ದಲ್ಲಿ, ಕೈಗಾರಿಕೆಗಳ ಹೆಸರು ಮತ್ತು ಮಂಜೂರು ಮಾಡಲಾದ ಒಟ್ಟು ಭೂಮಿಯ ಜಿಲ್ಲಾವಾರು (ವಿವರ ನೀಡುವುದು) ;

(ಇ) ಕೈಗಾರಿಕೆಗಳಿಗೆ ಭೂಮಿ ಮಂಜೂರು ಮಾಡುವಾಗ ವಿಧಿಸಿರುವ ಷರತ್ತುಗಳು ಮತ್ತು ಮಾನದಂಡವೇನು ?



## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಟೆಂಡರ್ ಅನುಮೋದನೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೪೨ (೪೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಳೆದ ಏಪ್ರಿಲ್–೨೦೧೩ ರಿಂದ ಇದುವರೆವಿಗೂ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಟೆಂಡರ್ ಅನುಮೋದಿಸಲಾಗಿದೆಯೇ (ಅದರ ಸಂಪೂರ್ಣ ವಿವರ ನೀಡುವುದು) ;

(ಆ) ಹಾಗಿದ್ದಲ್ಲಿ, ಎಷ್ಟು ಮೊತ್ತದ ಟೆಂಡರ್ ಅನುಮೋದಿಸಲಾಗಿದೆ ಹಾಗೂ ಟೆಂಡರ್ ಕರೆದ ಮತ್ತು ಪಾಲ್ಗೊಂಡ ಸಂಸ್ಥೆಗಳ ಸಂಪೂರ್ಣ ವಿವರ ನೀಡುವುದು ;

(ಇ) ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ಕಳೆದ ೨೦೧೩ ಏಪ್ರಿಲ್‌ನಿಂದ ಇಲ್ಲಿಯವರೆಗೆ ಎಷ್ಟು ಯೋಜನೆಗಳಿಗೆ ಅನುಮೋದನೆ ನೀಡಿದೆ (ಅವುಗಳ ಸಂಪೂರ್ಣ ವಿವರ ನೀಡುವುದು) ?

## ಕಸ ವಿಲೇವಾರಿ ಮತ್ತು ನ್ಯಾಯಾಲಯ ಸೂಚನೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೪೩ (೯೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಪ್ರತಿದಿನ ಉತ್ಪತ್ತಿಯಾಗುತ್ತಿರುವ ವಿವಿಧ ರೀತಿಯ ಕಸದ ಪ್ರಮಾಣ ಎಷ್ಟು ;

(ಆ) ಈ ಕಸ ವಿಲೇವಾರಿ ಮಾಡಲು ಇರುವ ವ್ಯವಸ್ಥೆ ಏನು; ಕಸ ವಿಲೇವಾರಿ ಮಾಡಲು ಇರುವ ಡಂಪಿಂಗ್ ಯಾರ್ಡ್‌ಗಳು ಎಷ್ಟು, ಅವು ಯಾವುವು ;

(ಇ) ಕಸ ವಿಲೇವಾರಿ ಮಾಡಲು ಹೊಸದಾಗಿ ಎಷ್ಟು ಡಂಪಿಂಗ್ ಯಾರ್ಡ್‌ಗಳನ್ನು ಗುರುತಿಸಲಾಗಿದೆ; ಅವು ಯಾವುವು, ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲೊಂದು ಡಂಪಿಂಗ್ ಯಾರ್ಡ್ ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು ;

(ಈ) ಕಸ ವಿಲೇವಾರಿ ಸಂಬಂಧ ನ್ಯಾಯಾಲಯ ನೀಡಿರುವ ಸೂಚನೆ ಏನು; ನ್ಯಾಯಾಲಯದ ಸೂಚನೆ ಪಾಲಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು ;

(ಉ) ಕಸ ವಿಲೇವಾರಿ ಆಗದಿದ್ದರೆ ಯಾರನ್ನು ಹೊಣೆಗಾರರನ್ನಾಗಿಸಲಾಗುವುದು, ಅವರ ವಿರುದ್ಧ ಕೈಗೊಳ್ಳುವ ಕ್ರಮವೇನು; ಸಮಯಕ್ಕೆ ಸರಿಯಾಗಿ ಕಸ ವಿಲೇವಾರಿ ಮಾಡದಿರುವ ಎಷ್ಟು ಜನ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು) ?



## ಹೊಸ ಜಿಲ್ಲೆ ರಚನೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೪ (೫೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ಹೊಸ ಜಿಲ್ಲೆಗಳನ್ನು ರಚಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯನ್ನು ವಿಭಜಿಸಿ ಚಿಕ್ಕೋಡಿ ಮತ್ತು ಗೋಕಾಕ ಹೊಸ ಜಿಲ್ಲೆಗಳನ್ನಾಗಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ;

(ಇ) ಹೊಸ ಜಿಲ್ಲೆಗಳನ್ನು ರಚಿಸುವಲ್ಲಿ ಇರುವ ಮಾನದಂಡಗಳೇನು;

(ಈ) ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡುವ ಅನುದಾನವನ್ನು ಜಿಲ್ಲೆಗಳ ಸಂಖ್ಯೆಗೆ ಆಧಾರವಾಗಿಟ್ಟುಕೊಂಡು ಅನುದಾನ ಬಿಡುಗಡೆ ಮಾಡುವುದೇ ;

(ಉ) ಯಾವ ಕಾಲಮಿತಿಯಲ್ಲಿ ನೂತನ ಜಿಲ್ಲೆಗಳನ್ನು ರಚಿಸಲಾಗುವುದು ?

## ಅತಿಕ್ರಮಣ ಕಟ್ಟಡಗಳ ತೆರವು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೫ (೫೯೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಅತಿಕ್ರಮಣ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ ;

(ಆ) ಪಾಲಿಕೆಗೆ ಇದರಿಂದ ಬಂದ ಆಸ್ತಿ ವಿವರ ನೀಡುವುದು ;

(ಇ) ಇಂದಿನ ಮಾರುಕಟ್ಟೆ ಬೆಲೆ ಆಧರಿಸಿ ಆಸ್ತಿಗಳ ಮೌಲ್ಯಗಳೆಷ್ಟು (ವಿವರಣೆಯೊಂದಿಗೆ) ?

## ಶಾಲಾ ಬಾಲಕಿಯರ ಮೇಲೆ ಅತ್ಯಾಚಾರ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೬ (೪೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಾಲಾ ಬಾಲಕಿಯರ ಮೇಲೆ ಪಾತಕಿಗಳು ಅತ್ಯಾಚಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಈಗಾಗಲೇ ನಮ್ಮ ರಾಜ್ಯದಲ್ಲಿ ಎಷ್ಟು ಶಾಲೆಗಳಲ್ಲಿ ಇಂತಹ ಪ್ರಕರಣಗಳು ನಡೆದಿರುತ್ತವೆ ;

(ಈ) ಅತ್ಯಾಚಾರ ಎಸಗಿದ ಎಷ್ಟು ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ ;

(ಉ) ಈ ವಿಚಾರದಲ್ಲಿ ನೂತನ ಕಾನೂನು ತರುವ ವಿಚಾರ ಸರ್ಕಾರದ ಮುಂದಿದೆಯೇ ?



## ಡಾ: ಡಿ.ಎಂ. ನಂಜುಂಡಪ್ಪನವರ ವರದಿ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೨ (೪೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಡಾ: ಡಿ.ಎಂ.ನಂಜುಂಡಪ್ಪನವರ ವರದಿಯಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದ ಕಾಮಗಾರಿಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಜಾರಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ವರದಿ ಜಾರಿಯಾದ ಮೇಲೆ ಸರ್ಕಾರವು ಇಲ್ಲಿಯವರೆಗೆ ಬಿಡುಗಡೆ ಮಾಡಿದ ವರ್ಷವಾರು ಅನುದಾನ ಎಷ್ಟು ;

(ಇ) ಬಿಡುಗಡೆ ಮಾಡಿದ ಅನುದಾನದಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳು ಯಾವುವು (ವರ್ಷವಾರು ವಿವರ ನೀಡುವುದು);

(ಈ) ಇನ್ನು ಅನುಷ್ಠಾನಗೊಳಿಸಬೇಕಾದ ಯೋಜನೆಗಳು ಯಾವುವು ; ಅವುಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?

## ಕಬ್ಬಿನ ಇತರ ಉತ್ಪನ್ನಗಳಿಂದ ತೆರಿಗೆ ಸಂದಾಯ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**

**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೮ (೪೯೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಂದು ಟನ್ ಕಬ್ಬಿನಿಂದ ರಾಜ್ಯ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಕಬ್ಬು, ಸಕ್ಕರೆ, ಪ್ರೇಸಮೀಡ, ಮೋಲ್ಯಾಸೀಸ್, ಬಗ್ಯಾಸ್ ಹಾಗೂ ಕಬ್ಬಿನ ಇತರ ಉತ್ಪನ್ನಗಳಿಂದ ಸಂದಾಯವಾಗುವ ಹಣವೆಷ್ಟು ;

(ಆ) ಹಾಗಿದ್ದಲ್ಲಿ, ಸಕ್ಕರೆ ಉದ್ಯಮದಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಹಣ ಸಂದಾಯವಾಗುತ್ತಿದ್ದರೂ ಕೂಡಾ ಸರ್ಕಾರವು ರೈತರಿಗೆ ಬೆಂಬಲಬೆಲೆ ಘೋಷಣೆ ಮಾಡುವಲ್ಲಿ ಏಕೆ ಹಿಂದೇಟು ಹಾಕುತ್ತಿದೆ;

(ಇ) ಉತ್ತರ ಪ್ರದೇಶ – ಬಿಹಾರ ರಾಜ್ಯಗಳಲ್ಲಿ ಕಬ್ಬು ಬೆಳೆಗಾರರಿಗೆ ಸರ್ಕಾರವು ಕಬ್ಬಿಗೆ ಎಷ್ಟು ಸಹಾಯಧನ ನೀಡುತ್ತಿವೆ ; ನಮ್ಮ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಕಬ್ಬು ಬೆಳೆಗಾರರಿಗೆ ಸಹಾಯಧನ ನಿಗದಿಪಡಿಸಲಾಗಿದೆಯೇ (ವಿವರಣೆ ನೀಡುವುದು) ;

(ಈ) ಪ್ರತಿ ವರ್ಷ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ ಕಬ್ಬು ಬೆಳೆಗಾರರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯುವುದಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?



## ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೪೯ (೫೦೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿಯಿರುವುದು ನಿಜವೇ ;

(ಆ) ಖಾಲಿಯಿದ್ದಲ್ಲಿ, ಯಾವ ಅವಧಿಯಿಂದ ಯಾವ ಯಾವ ಪ್ರೌಢ ಶಾಲೆಗಳಲ್ಲಿ ಖಾಲಿಯಿವೆ ;

(ಇ) ಖಾಲಿಯಿರುವ ಮುಖ್ಯ ಶಿಕ್ಷಕರ ಹುದ್ದೆಗಳು ಯಾವ ಯಾವ ಪ್ರವರ್ಗಕ್ಕೆ ಸೇರಿವೆ ;

(ಈ) ದೀರ್ಘಕಾಲದಿಂದ ಖಾಲಿಯಿರಲು ಕಾರಣವೇನು ?

## ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೫೦ (೫೦೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, ೨೦೧೨" ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ ೭೭ ಶಾಸನ, ೨೦೧೨, ದಿನಾಂಕ: ೧೫.೦೨.೨೦೧೩ರ ಸೆಕ್ಷನ್ ೧(೨)ರನ್ವಯ ಆದೇಶವು ಕೂಡಲೇ ಜಾರಿಗೆ ಬರತಕ್ಕದ್ದು ಎಂದು ಆದೇಶಿಸಲಾಗಿದ್ದು, ಕರ್ನಾಟಕ ಸರ್ಕಾರದ ನಡವಳಿಗಳ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/ಸೇಸ್ಥ ೨೦೧೪,

ದಿನಾಂಕ: ೧೯.೦೯.೨೦೧೪ರ ಆದೇಶದ ಅನ್ವಯ ಆಯಾ ಇಲಾಖೆಯು ಅರ್ಹ ದಿನಗೂಲಿ ನೌಕರರ ಹೆಸರನ್ನು ಅಧಿಸೂಚಿಸಿ ಹೊರಡಿಸಿದ ದಿನಾಂಕದಿಂದ ಸೌಲಭ್ಯಗಳು ಲಭ್ಯವಾಗತಕ್ಕದ್ದು ಎಂದು ಆದೇಶಿಸಿರುವುದು ಸಮಂಜಸವೇ ;

(ಆ) "ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ, ೨೦೧೩" ನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಯಾ ಸಂಬಂಧಪಟ್ಟ ಇಲಾಖೆಯು ದಿನಗೂಲಿ ನೌಕರರ ಯಾದಿಯನ್ನು ತಯಾರಿಸಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಯಾವ ಯಾವ ಇಲಾಖೆಯು ಯಾವ ಯಾವ ದಿನಾಂಕಗಳಲ್ಲಿ ಪ್ರಕಟಿಸಲಾಗಿರುತ್ತದೆ ;

(ಇ) ಪ್ರತಿ ಇಲಾಖೆಯು ಬೇರೆ ಬೇರೆ ದಿನಾಂಕಗಳಲ್ಲಿ ದಿನಗೂಲಿ ನೌಕರರ ಹೆಸರನ್ನು ಅಧಿಸೂಚಿಸಿ ಆದೇಶ ಹೊರಡಿಸಿರುವುದರಿಂದ ದಿನಗೂಲಿ ನೌಕರರಿಗೆ ಲಭ್ಯವಾಗಬೇಕಾದ ಆರ್ಥಿಕ ಸವಲತ್ತುಗಳು ತಾರತಮ್ಯ ಮಾಡಿದಂತಾಗುವುದಿಲ್ಲವೇ ;

(ಈ) ಆಗಿದ್ದಲ್ಲಿ, ರಾಜ್ಯಪಾಲರು ಸಹಿ ಮಾಡಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸವಲತ್ತುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೇ ;

(ಉ) ಈ ಸರ್ಕಾರಿ ಆದೇಶದ ಅನ್ವಯ ಆಯಾ ಇಲಾಖೆಯು ಯಾವ ಲೆಕ್ಕಶೀರ್ಷಿಕೆಯಡಿ ವೇತನವನ್ನು ನಿಗದಿಪಡಿಸತಕ್ಕದ್ದು ;

(ಊ) ಸದರಿ ಸರ್ಕಾರಿ ಆದೇಶದಲ್ಲಿ ದಿನಗೂಲಿ ನೌಕರರ ವೇತನ ಮತ್ತು ಇತರ ಭತ್ಯೆಗಳನ್ನು ಪಾವತಿಸಲು ಮಾರ್ಗಸೂಚಿಗಳನ್ನು ತಿಳಿಸಲಾಗಿದೆಯೇ ; ಹಾಗಿದ್ದಲ್ಲಿ, ಮಾರ್ಗಸೂಚಿಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುವುದೇ ?



## ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮಹಿಳಾ ಖೈದಿಗಳಿಗೆ ಆಗುತ್ತಿರುವ ದೌರ್ಜನ್ಯ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೫೧ (೫೦೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪ್ರಸ್ತುತ ಇರುವ ಮಹಿಳಾ ಖೈದಿಗಳ ಸಂಖ್ಯೆ ಎಷ್ಟು ;

(ಆ) ಇತ್ತೀಚೆಗೆ ಮಹಿಳಾ ಖೈದಿಗಳು ಲೈಂಗಿಕ ದೌರ್ಜನ್ಯ ನಡೆಯುತ್ತಿದೆಯೆಂದು ಪತ್ರ ಬರೆದಿರುವುದು ನಿಜವೇ (ವಿವರ ನೀಡುವುದು) ;

(ಇ) ಇಲ್ಲವಾದಲ್ಲಿ, ಆ ರೀತಿ ಸುದ್ದಿ ಹರಡಲು ಕಾರಣವೇನು ;

(ಈ) ಸದರಿ ಪ್ರಕರಣದ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?

## ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೫೨ (೫೦೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೧೯೮೪ರ ನಂತರ ನೇಮಕಗೊಂಡು ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಪೈಕಿ ದಿನಾಂಕ:

೨೦೦೬ರ ಏಪ್ರಿಲ್ ೧೦ಕ್ಕೆ ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು (ಇಲಾಖಾವಾರು) ;

(ಆ) ದಿನಾಂಕ: ೨೦೧೩ರ ಫೆಬ್ರವರಿ ೧೫ಕ್ಕೆ ಮತ್ತು ನಂತರ ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು (ಇಲಾಖಾವಾರು) ;

(ಇ) ದೀರ್ಘಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಮತ್ತು ಮರಣ ಹೊಂದಿದ ನೌಕರರ ಕುಟುಂಬ ವರ್ಗದವರಿಗೆ ಯಾವುದಾದರೂ ಸಾಮಾಜಿಕ ಮತ್ತು ಆರ್ಥಿಕ ಸವಲತ್ತುಗಳನ್ನು ಸರ್ಕಾರದಿಂದ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

## ಜಾಗೃತಿ ಆಗ್ರೋ ಫಾರ್ಮಸ್ ಕಂಪನಿ ಕಾರ್ಯ ನಿರ್ವಹಣೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೫೩ (೫೦೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ ಜಿಲ್ಲೆಯಲ್ಲಿ ಜಾಗೃತಿ ಆಗ್ರೋ ಫಾರ್ಮಸ್ ಎಂಬ ಹೆಸರಿನ ಸಂಸ್ಥೆಯು ಸರ್ಕಾರದಿಂದ ಅನುಮತಿ ಪಡೆದಿದೆಯೇ; ಪಡೆದಿದ್ದಲ್ಲಿ, ಅದು ಯಾವಾಗ, ಯಾರ ಹೆಸರಿನಲ್ಲಿದೆ ವಿವರಣೆ ನೀಡುವುದು;

(ಆ) ಹಾಗಿದ್ದಲ್ಲಿ, ಈ ಸಂಸ್ಥೆಯು ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕಂಪನಿ ಪ್ರಾರಂಭಿಸಿದೆ; ಈ ಸಂಸ್ಥೆಯ ವತಿಯಿಂದ ಕುರಿ/ ಮೇಕೆ(ಆಡು) ಪ್ರಾಣಿ ಸಾಕಣಿಕೆ ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದರ ಸಂಪೂರ್ಣ ಮಾಹಿತಿ ನೀಡುವುದು;



(ಇ) ಈ ಸಂಸ್ಥೆಯು ಸಾರ್ವಜನಿಕರಿಂದ ಸಂಸ್ಥೆಯ ಶೇರುದಾರರಾಗಲು ತಲಾ ರೂ.೫೦೦೦/– ಗಳನ್ನು ಸಂಗ್ರಹಿಸುತ್ತಿರುವುದು ನಿಜವೇ; ಈ ಸಂಸ್ಥೆಯು ಪ್ರತಿಯೊಬ್ಬ ಶೇರುದಾರರಿಗೂ ೫ ವರ್ಷಗಳಲ್ಲಿ ರೂ.೫೦,೦೦೦/– ವರೆಗೆ ಲಾಭ ನೀಡಲಾಗುವುದು ಎಂದು ಸಾರ್ವಜನಿಕರಿಗೆ ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಈ ಸಂಸ್ಥೆಯ ಆಡಳಿತ ಮಂಡಳಿಯ ವಿರುದ್ಧ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು) ;

(ಈ) ಹಾಗಿದ್ದಲ್ಲಿ, ಯಾವ ಯಾವ ಕಂಪನಿ ಮತ್ತು ಸಂಸ್ಥೆಗಳಲ್ಲಿ ಎಷ್ಟು ಜನ ಶೇರುದಾರರಿದ್ದಾರೆ; ಅವರ ಹೆಸರು ಮತ್ತು ಒಟ್ಟು ಸಂಸ್ಥೆಗಳವಾರು ಸಂಗ್ರಹವಾದ ಹಣದ ಮೊತ್ತ ಎಷ್ಟು; ಸಂಪೂರ್ಣ ಮಾಹಿತಿ ನೀಡುವುದು; ಹಾಗೂ ಪ್ರತ್ಯೇಕ ಜಾಗೃತಿ ಆಗ್ರೋ ಫಾರ್ಮಸ್ ಕಂಪನಿಯಲ್ಲಿ ಎಷ್ಟು ಜನ ಶೇರುದಾರರು ಎಷ್ಟು ಹಣ ಹೂಡಿದ್ದಾರೆ (ಅವರುಗಳ ಹೆಸರು ಮತ್ತು ವಿಳಾಸದೊಂದಿಗೆ ವಿವರ ನೀಡುವುದು) ?

## ಹಸಿರು ವಲಯದಿಂದ ಭೂಮಿ ಮುಕ್ತಗೊಳಿಸುವುದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೫೪ (೫೦೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಹಸಿರು ವಲಯದಿಂದ ಎಷ್ಟು ಎಕರೆ ಭೂಮಿಯನ್ನು ಮುಕ್ತಗೊಳಿಸಿ, ಭೂ ಉಪಯೋಗಕ್ಕೆ ವರ್ಗಾಯಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಭೂ ಉಪಯೋಗ ಬದಲಾವಣೆಗಾಗಿ ಎಷ್ಟು ಕಡತಗಳು ಸರ್ಕಾರದ ಮುಂದಿವೆ (ಜಿಲ್ಲಾವಾರು ಮಾಹಿತಿ ನೀಡುವುದು) ?

## ಅನುಚ್ಛೇದ ೩೭೧ (ಜೆ) ಅನ್ವಯ ಸೇವಾ ಮುಂಬಡ್ತಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೫೫ (೫೦೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ಸೇರಿದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಿದ್ದರೂ ಸಹ ಕೆಎಟಿ ತಡೆಯಾಜ್ಞೆಯಿಂದಾಗಿ ಬಡ್ತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ತಡೆಯಾಜ್ಞೆ ತೆರವುಗೊಳಿಸಲು ಮತ್ತು ನಿಯಮಗಳಿಗೆ ಸೂಕ್ತ ತಿದ್ದುಪಡಿ ತಂದು ಶೇಕಡ ೨ಕ್ಕಿಂತ ಕಡಿಮೆ ಇರುವ ಸದರಿ ನೌಕರರಿಗೆ ಬಡ್ತಿ ನೀಡಿ ಅವರ ನೈತಿಕ ಸ್ಥೈರ್ಯ ಕುಗ್ಗದಂತೆ ಮಾಡಲು ಸರ್ಕಾರ ತೆಗೆದುಕೊಳ್ಳಲಾಗುವ ಕ್ರಮಗಳೇನು ;

(ಇ) ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಯಾವ ಯಾವ ಇಲಾಖೆಯಲ್ಲಿ ಎಷ್ಟು ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ (ವಿವರ ನೀಡುವುದು) ?



## ಅನ್ಯ ಸೇವೆ ಆಧಾರ ಪದ್ಧತಿಯ ಪರಿಷ್ಕರಣೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೫೬ (೫೦೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೊಂಡಿದ್ದರೂ ಸಹ ಅನ್ಯ ಸೇವೆ (O.O.D.) ಆಧಾರದ ಮೇಲೆ ಪುನ: ಅದೇ ಹುದ್ದೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರೀತಿ ಎಷ್ಟು ಸಿಬ್ಬಂದಿ ಎಷ್ಟು ವರ್ಷಗಳಿಂದ ಓ.ಓ.ಡಿ. ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ (ಸಂಪೂರ್ಣ ವಿವರ ಒದಗಿಸುವುದು) ;

(ಇ) ಓ.ಓ.ಡಿ. ಆಧಾರದ ಮೇಲೆ ನಿಯೋಜಿಸುವ ಪದ್ಧತಿಯ ನಿಯಮ ಪರಿಷ್ಕರಿಸಿ ಎಲ್ಲಾ ಸಿಬ್ಬಂದಿಗಳಿಗೂ ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸುವ ಬಗ್ಗೆ ಸರ್ಕಾರ ಕ್ರಮ ವಹಿಸುತ್ತಿದೆಯೇ (ವಿವರ ನೀಡುವುದು) ?

## ಪೊಲೀಸ್ ಇಲಾಖೆಗೆ ಆಹಾರ ಧಾನ್ಯ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೫೭ (೫೦೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್–ಗುಲ್ಬರ್ಗಾ ಜಿಲ್ಲೆಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಸರಿಯಾಗಿ ಆಹಾರ ಧಾನ್ಯ ವಿತರಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಸರ್ಕಾರವು ಯಾವ ಕಾರಣಗಳಿಂದ ವಿತರಣೆ ಮಾಡದೆ ತಡೆಹಿಡಿಯಲಾಗಿದೆ (ವಿವರ ನೀಡುವುದು) ;

(ಇ) ಸರ್ಕಾರವು ಪೊಲೀಸ್ ಸಿಬ್ಬಂದಿಗಳಿಗೆ ಆಹಾರ ವಿತರಣೆ ಮಾಡುವುದನ್ನು ಯಾವಾಗಿನಿಂದ ಜಾರಿಗೆ ತಂದಿರುತ್ತದೆ ; ಪ್ರತಿ ವರ್ಷ ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯ ವಿತರಿಸಲಾಗುವುದು (ಮಾಹಿತಿ ನೀಡುವುದು) ?

## ಎರಡನೇ ಹೈಕೋರ್ಟ್ ಪೀಠ ಸ್ಥಾಪನೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೩೫೮ (೫೧೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರಿನಲ್ಲಿ ರಾಜ್ಯದ ಹೈಕೋರ್ಟ್ ಪೀಠವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಈ ಭಾಗದ



ವಕೀಲರುಗಳಿಂದ ಮತ್ತು ಕಕ್ಷಿದಾರರುಗಳಿಂದ ಸರ್ಕಾರದ ಮುಂದೆ ಬೇಡಿಕೆ ಸಲ್ಲಿಸಲಾಗಿದೆಯೇ (ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ನೋಂದಾಯಿತ ವಕೀಲರುಗಳ ಸಂಖ್ಯೆ ಎಷ್ಟು ; ಸರ್ಕಾರಿ ಅಭಿಯೋಜಿತರ ಸಂಖ್ಯೆ ಎಷ್ಟು (ವಿವರ ನೀಡುವುದು) ;

(ಇ) ವಕೀಲರ ವೃತ್ತಿ ಪ್ರಾರಂಭಿಸುವ ಹಂತದಲ್ಲಿ ವಕೀಲರುಗಳಿಗೆ ನೀಡುವ ಸ್ಟೈಫಂಡ್ ಮೊತ್ತವನ್ನು ಕನಿಷ್ಠ ೫ ಸಾವಿರಕ್ಕೆ ಏರಿಸುವ ಬೇಡಿಕೆಯನ್ನು ಜಾರಿಗೊಳಿಸಲಾಗುವುದೇ ; ಪ್ರಸ್ತುತ ರಾಜ್ಯದಲ್ಲಿ ಎಷ್ಟು ವಕೀಲರುಗಳಿಗೆ ಪ್ರಾರಂಭಿಕ ಹಂತದ ಸ್ಟೈಫಂಡ್‌ಗಳನ್ನು ನೀಡಲಾಗುತ್ತಿದೆ (ವಿವರ ನೀಡುವುದು) ;

(ಈ) ರಾಜ್ಯದ ವಕೀಲರ ಸಂಘಗಳಿಗೆ ಲೈಬ್ರರಿ, ಪೀಠೋಪಕರಣಗಳ ಮೂಲಭೂತ ಸೌಕರ್ಯಗಳಿಗೆ ಎಷ್ಟು ಹಣ ಬಿಡುಗಡೆ ಗೊಳಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಉ) ಬಾರ್ ಅಸೋಸಿಯೇಷನ್‌ಗಳಿಗೆ ವರ್ಷಕ್ಕೆ ಕನಿಷ್ಟ ರೂ. ೧೦ ಲಕ್ಷಗಳನ್ನು ಮತ್ತು ಜಿಲ್ಲಾ ಬಾರ್ ಅಸೋಸಿಯೇಷನ್ ಗಳಿಗೆ ರೂ. ೫೦ ಲಕ್ಷ ಅನುದಾನ ಕೊಡಲು ಸರ್ಕಾರ ಕ್ರಮಕೈಗೊಳ್ಳುವುದೆ ; ಈ ಪ್ರಕಾರ ಅನುದಾನ ಕೊಟ್ಟಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು ?

## ನಿವೃತ್ತಿ ಪೊಲೀಸ್ ಅಧಿಕಾರಿಗಳಿಗೆ ರಿಯಾಯಿತಿ ದರದಲ್ಲಿ ಕ್ಯಾಂಟಿನ್ ವ್ಯವಸ್ಥೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೩೪೯ (೫೧೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ನಿವೃತ್ತಿ ಪೊಲೀಸ್ ಅಧಿಕಾರಿಗಳಿಗೆ ಮತ್ತು ಪೊಲೀಸರಿಗೆ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಕ್ಯಾಂಟಿನ್ ವ್ಯವಸ್ಥೆಯನ್ನು ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇಲಾಖೆಯ ನಿವೃತ್ತಿ ಸಿಬ್ಬಂದಿಗಳಿಂದ ಸಲ್ಲಿಸಿದ ಬೇಡಿಕೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ; ಭರ್ತಿ ಮಾಡಲು ಕೈಗೊಂಡ ಕ್ರಮಗಳು ಯಾವುವು;

(ಇ) ಪೊಲೀಸ್ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಸಂಖ್ಯೆ ಹೆಚ್ಚಿಸಲು ಮತ್ತು ಪೊಲೀಸ್ ಠಾಣೆಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಇಲಾಖೆಯು ಕೈಗೊಂಡ ಕಾರ್ಯಕ್ರಮಗಳು ಯಾವುವು ; ಈ ಯೋಜನೆಗಳಿಗೆ ಎಷ್ಟು ಹಣ ಮೀಸಲಿಡಲಾಗಿದೆ ;

(ಈ) ಪೊಲೀಸ್ ಸಿಬ್ಬಂದಿಗಳ ವಸತಿ ಗೃಹಗಳು ದುಸ್ಥಿತಿಯಲ್ಲಿ ಇರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ರಾಜ್ಯದಲ್ಲಿ ಒಟ್ಟು ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲು ಇಲಾಖೆ ಕ್ರಮಕೈಗೊಂಡಿದೆ (ಜಿಲ್ಲಾವಾರು ವಿವರ ನೀಡುವುದು) ;

(ಉ) ಪೊಲೀಸ್ ಸಿಬ್ಬಂದಿಗಳ ಮಕ್ಕಳಿಗಾಗಿ ಪ್ರತ್ಯೇಕ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜು ಸ್ಥಾಪಿಸಲು ಸರ್ಕಾರದ ಮುಂದೆ ಪ್ರಸ್ತಾವನೆ



ಇದೆಯೇ ; ಇದ್ದರೆ ಯಾವ ಯಾವ ಹಂತದಲ್ಲಿದೆ ; ಮತ್ತು ಯಾವ ಪ್ರದೇಶದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗಿದೆ (ವಿವರ ನೀಡುವುದು) ?

## ಮಹಾನಗರ ಪಾಲಿಕೆಯ ವಿವಿಧ ಕಾರ್ಯಕ್ರಮಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೩೬೦ (೫೧೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರಕಾರದ ಸ್ಮಾರ್ಟ್‌ಸಿಟಿ ಯೋಜನೆಯನ್ವಯ ಮಂಗಳೂರು ನಗರವನ್ನು ಸ್ಮಾರ್ಟ್‌ಸಿಟಿ ಪಟ್ಟಿಗೆ ಸೇರಿಸಿಕೊಳ್ಳುವ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಯಾವ ಯಾವ ಮಾನದಂಡಗಳನ್ನು ಸ್ಮಾರ್ಟ್‌ಸಿಟಿಗಾಗಿ ಪರಿಗಣಿಸಲಾಗಿದೆ ; ರಾಜ್ಯದಲ್ಲಿ ಯಾವ ಯಾವ ನಗರಗಳನ್ನು ಸ್ಮಾರ್ಟ್‌ಸಿಟಿಯನ್ನಾಗಿ ಮಾಡಲು ಕೇಂದ್ರ ಸರಕಾರದಿಂದ ಯೋಜನೆ ನಿರೂಪಿಸಲಾಗಿದೆ (ವಿವರ ನೀಡುವುದು) ;

(ಆ) ಮಂಗಳೂರು ಮಹಾನಗರಪಾಲಿಕೆಯಲ್ಲಿ ಸ್ವಯಂಘೋಷಿತ ತೆರಿಗೆ ಪದ್ಧತಿಯನ್ನು ರದ್ದುಮಾಡಲು ನಗರಪಾಲಿಕೆಯ ಸದಸ್ಯರು ಕೈಗೊಂಡ ನಿರ್ಣಯುವನ್ನು ಸ್ವೀಕರಿಸಲಾಗಿದೆಯೇ ; ನಗರಪಾಲಿಕೆಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ವಸೂಲಿ ಮಾಡುವ ಬಗ್ಗೆ ಯಾವ ಕ್ರಮಕೈಗೊಂಡಿದೆ ;

(ಇ) ನಗರಪಾಲಿಕೆಗೆ ಆಯುಕ್ತರ ಹುದ್ದೆಯನ್ನು ತುಂಬದೇ ಇರುವ ಕಾರಣಗಳೇನು ; ಆಯುಕ್ತರು ಇಲ್ಲದೆ ನಗರಪಾಲಿಕೆಯ ಪ್ರಗತಿಯು ಹಿನ್ನೆಡೆ ಸಾಧಿಸಿದೆ ಎಂಬ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ;

(ಈ) ನಗರಪಾಲಿಕೆ ವ್ಯಾಪ್ತಿಯ ಕಸ ವಿಲೇವಾರಿಗೆ ಸರಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು ; ಕಸ ವಿಲೇವಾರಿಗಾಗಿ ಹೆಚ್ಚುವರಿ ಶುಲ್ಕವನ್ನು ಪ್ರತಿ ಮನೆಯಿಂದ ನಗರಪಾಲಿಕೆ ವಸೂಲಿ ಮಾಡುತ್ತಿದೆಯೇ (ವಿವರ ನೀಡುವುದು) ;

(ಉ) ೨೦೧೨ ರಿಂದ ೨೦೧೪ನೇ ಸಾಲಿನವರೆಗೆ ನಗರಪಾಲಿಕೆಗೆ ಬಿಡುಗಡೆ ಮಾಡಿದ ವಿಶೇಷ ಅನುದಾನ ಎಷ್ಟು (ವಿವರ ನೀಡುವುದು) ?

## ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ರಸಗೊಬ್ಬರ ಕಾರ್ಖಾನೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೩೬೧ (೫೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ (MCF) ರಸಗೊಬ್ಬರ ಕಾರ್ಖಾನೆಯು ನಾಪ್ತ್ ಬಳಕೆಯಿಂದ ನಡೆಯುತ್ತಿದ್ದು, ಕೇಂದ್ರ ಸರಕಾರದ ನಿರ್ದೇಶನದಂತೆ ಸದರಿ ಕಾರ್ಖಾನೆ ಗ್ಯಾಸ್ ಮುಖಾಂತರ ನಡೆಸಬೇಕೆಂಬ ಆದೇಶದಂತೆ ಸುಮಾರು ರೂ. ೩೦೦ ಕೋಟಿ ವೆಚ್ಚದಿಂದ ಗ್ಯಾಸ್ ಬಳಿಕೆಗೆ ಪರಿವರ್ತನೆ ಮಾಡಿದ್ದು, ಗ್ಯಾಸ್‌ನ್ನು ಸರಬರಾಜು ಮಾಡದೇ ಸದರಿ ಕಾರ್ಖಾನೆಯು ಯೂರಿಯಾ ಉತ್ಪಾದನೆಯನ್ನು ಬಂದ್ ಮಾಡಿರುವುದರ ಬಗ್ಗೆ ಸರಕಾರ ಕೈಗೊಂಡ ಕಾರ್ಯಕ್ರಮಗಳೇನು ;



(ಆ) ಈ ಕಾರ್ಖಾನೆಯಲ್ಲಿ ಸುಮಾರು ಎರಡು ಸಾವಿರ ಮಂದಿ ನೇರ ಉದ್ಯೋಗಿಗಳಿದ್ದು ಐದು ಸಾವಿರ ಮಂದಿ ಪರೋಕ್ಷ ಉದ್ಯೋಗಿಗಳಿದ್ದು ಅವರ ಬಗ್ಗೆ ಸರಕಾರ ಚಿಂತನೆ ನಡೆಸಿದೆಯೇ ;

(ಇ) ರೈತರ ಜೀವನಾಡಿಯಾಗಿರುವ ಯೂರಿಯಾ ಉತ್ಪಾದನೆಯು, ವರ್ಷದ ೩.೮೦ ಲಕ್ಷ ಟನ್ "ಮಂಗಳ" ಬ್ರ್ಯಾಂಡ್‌ನ ಯೂರಿಯಾ ಉತ್ಪಾದನೆ ಆಗದೇ ಇರುವುದರಿಂದ ರೈತರ ಸಂಕಷ್ಟದ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ ;

(ಈ) ಗ್ಯಾಸ್ ಸರಬರಾಜು ಮಾಡಲು ವಿಫಲಗೊಂಡ ಹಿನ್ನೆಲೆಯಲ್ಲಿ ನ್ಯಾಪ್ತ್ ಮೂಲಕ ಕಾರ್ಖಾನೆ ನಡೆಸಲು ಕೇಂದ್ರ ಸರಕಾರದ ಮುಂದೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ (ವಿವರ ನೀಡುವುದು) ;

(ಉ) ಮಂಗಳೂರಿನ ಕುದುರೆಮುಖ ಅದಿರು ಕಂಪನಿಯು, ಅದಿರು ಇಲ್ಲದೇ ಕಾರ್ಖಾನೆಯು ಸಂಕಷ್ಟವನ್ನು ಎದುರಿಸುತ್ತಿರುವ ಬಗ್ಗೆ ಸರಕಾರದ ಗಮನದಲ್ಲಿದೆಯೇ (ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ನೀಡುವುದು) ?

## ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಮಂಜೂರಾದ ನಿವೇಶನಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೩೬೨ (೫೧೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿ ಮಂಜೂರು ಮಾಡಿದ ನಿವೇಶನಗಳು ಎಷ್ಟು (ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕಾಗಿ ಕಳೆದ ೩ ವರ್ಷಗಳಿಂದ ಸರಕಾರ ಕ್ರಮಕೈಗೊಂಡ ಯೋಜನೆಗಳು ಯಾವುವು (ವಿವರ ನೀಡುವುದು) ;

(ಇ) ಈ ಪ್ರಾಧಿಕಾರದಲ್ಲಿ ಮಂಜೂರಾದ ಅಧಿಕಾರಿ/ಸಿಬ್ಬಂದಿ ವರ್ಗದವರ ಒಟ್ಟು ಹುದ್ದೆಗಳೆಷ್ಟು ; ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು ;

(ಈ) ನಗರಾಭಿವೃದ್ಧಿ ಪ್ರಾಧಿಕಾರ ಪ್ಯಾಪ್ತಿಯಲ್ಲಿ ನಿರ್ಮಾಣಗೊಂಡ ಅನಧಿಕೃತ/ಕಾನೂನು ಬಾಹಿರ ಕಟ್ಟಡಗಳ ಸಂಖ್ಯೆ ಎಷ್ಟು ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ; ಎಷ್ಟು ಪ್ರಕರಣ ದಾಖಲು ಮಾಡಲಾಗಿದೆ ; ಎಷ್ಟು ದಂಡ ವಸೂಲಿ ಮಾಡಲಾಗಿದೆ ;

(ಉ) ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ವಹಿಸುತ್ತಿರುವ ಯೋಜನೆಗಳು ಬಾಕಿ ಇದ್ದಲ್ಲಿ ಅವು ಎಷ್ಟು ಮತ್ತು ಅವು ಯಾವ ಸಮುದಾಯದಲ್ಲಿ ಬಾಕಿ ಇವೆ (ವಿವರ ನೀಡುವುದು) ;

(ಊ) ಪ್ರಾಧಿಕಾರವು ಯಾವುದೇ ಯೋಜನೆ ಕೈಗೊಳ್ಳದೇ ನಿಷ್ಕ್ರಿಯವಾಗಿದೆ ಎಂಬುದು ಸರಕಾರದ ಗಮನದಲ್ಲಿದೆಯೇ ; ಕಳೆದ ೩ ವರ್ಷಗಳಿಂದ ಸರಕಾರ ವಿವಿಧ ಯೋಜನೆಯಡಿ ನೀಡಿದ ಅನುದಾನ ಎಷ್ಟು ;

(ಋ) ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಮಹಾನಗರಪಾಲಿಕೆ ಜೊತೆ ಸಂಯೋಜಿಸುವ ಚಿಂತನೆ ಸರಕಾರದ ಮುಂದಿದೆಯೇ ?



## ಪೊಲೀಸ್ ವಸತಿ ಗೃಹಗಳು

**ಶ್ರೀ ಅಲ್ಲಮಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೩ (೫೧೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು) ;

(ಆ) ರಾಜ್ಯದ ಯಾವ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪೊಲೀಸ್ ವಸತಿ ಗೃಹಗಳಿರುವುದಿಲ್ಲ (ಜಿಲ್ಲಾವಾರು ಮಾಹಿತಿ ನೀಡುವುದು);

(ಇ) ಇಲ್ಲದಿರುವ ಸ್ಥಳಗಳಲ್ಲಿ ಪೊಲೀಸ್ ವಸತಿ ಗೃಹಗಳನ್ನು ಸ್ಥಾಪಿಸಿ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಮುಜರಾಯಿ ದೇವಸ್ಥಾನಗಳು

**ಶ್ರೀ ಅಲ್ಲಮಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೪ (೫೧೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ಒಟ್ಟು ದೇವಸ್ಥಾನಗಳು ಎಷ್ಟು, ಅಂತಹ ದೇವಸ್ಥಾನಗಳಿಂದ ಬೊಕ್ಕಸಕ್ಕೆ ಬರತಕ್ಕಂತಹ ಆದಾಯವೆಷ್ಟು ;

(ಆ) ಇಲ್ಲಿಯವರೆಗೆ ರಾಜ್ಯದಲ್ಲಿ ಇರುವ ನೋಂದಾಯಿತ ಹಾಗೂ ನೋಂದಾಯಿತವಲ್ಲದ ದೇವಸ್ಥಾನಗಳು ಎಷ್ಟು, ಅಂತಹ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಕಳೆದ ಸಾಲಿನಲ್ಲಿ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡಲು ಇರುವ ಸರ್ಕಾರದ ಮಾನದಂಡಗಳೇನು ?

## ಪಶುಸಂಗೋಪನೆ ಯೋಜನೆಗಳು

**ಶ್ರೀ ಅಲ್ಲಮಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೫ (೫೧೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಪಶುಸಂಗೋಪನೆ ಇಲಾಖೆ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳಾವುವು, ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ತಾಲ್ಲೂಕುವಾರು, ಯೋಜನೆವಾರು ವಿವರ ಒದಗಿಸುವುದು) ;

(ಆ) ಜಿಲ್ಲೆಯಲ್ಲಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು, ಅವುಗಳ ರೂಪರೇಷೆಗಳೇನು ;

(ಇ) ಈ ಜಿಲ್ಲೆಯಲ್ಲಿ ಇಲಾಖೆಗೆ ಹೊಸ ಪ್ರಸ್ತಾವನೆಗಳೇನಾದರೂ ಬಂದಿದೆಯೇ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?



## ಹೊಸ ಬಡಾವಣೆಗಳ ನಿರ್ಮಾಣ

**ಶ್ರೀ ಅಲ್ಲಮಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೬ (೫೧೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳೆಯುತ್ತಿರುವ ನಗರಗಳೆನಿಸಿದ ಕಲ್ಬುರ್ಗಿ ಮತ್ತು ಯಾದಗಿರಿ ನಗರಗಳಲ್ಲಿ ಹೊಸದಾಗಿ ಬಡಾವಣೆ ನಿರ್ಮಾಣ ಮಾಡುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಇದ್ದಲ್ಲಿ, ಕಲ್ಬುರ್ಗಿ ಮತ್ತು ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ ಕಳೆದ ೧೦ ವರ್ಷಗಳಿಂದ ಯಾವುದೇ ಬಡಾವಣೆ ನಿರ್ಮಾಣ ಮಾಡದಿರಲು ಕಾರಣಗಳೇನು ;

(ಇ) ಜನಸಂಖ್ಯೆಗೆ ತಕ್ಕಂತೆ ಹೊಸ ಬಡಾವಣೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಹಾಗಿದ್ದಲ್ಲಿ, ಯಾವಾಗ ಪ್ರಸ್ತಾವನೆಗೆ ಅನುಮೋದನೆ ನೀಡಲಾಗುವುದು ; ಸರ್ಕಾರಿ ಜಮೀನು ಲಭ್ಯವಿದೆಯೇ, ಇಲ್ಲದಿದ್ದಲ್ಲಿ, ಖಾಸಗಿ ಜಮೀನು ಖರೀದಿಸುವ ಯೋಜನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ?

## ಭಾರಿ ಮತ್ತು ಮಧ್ಯಮ ಕೈಗಾರಿಕೆ ಯೋಜನೆಗಳು

**ಶ್ರೀ ಅಲ್ಲಮಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೭ (೫೧೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೆ ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಿದ ಭಾರಿ ಮತ್ತು ಮಧ್ಯಮ ಕೈಗಾರಿಕಾ

ಯೋಜನೆಗಳು ಯಾವುವು, ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು (ಯೋಜನಾವಾರು ವಿವರ ನೀಡುವುದು) ;

(ಆ) ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳು ಯಾವುವು, ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ಯೋಜನೆವಾರು ವಿವರ ನೀಡುವುದು) ;

(ಇ) ಹೊಸ ಯೋಜನೆಗಳ ಪ್ರಸ್ತಾವನೆಗಳೇನಾದರು ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಜಿಲ್ಲೆಯ ಯಾವ ಕ್ಷೇತ್ರದಲ್ಲಿ ಪ್ರಸ್ತಾಪಗಳಿವೆ (ಇದ್ದರೆ, ಆ ಕ್ಷೇತ್ರದ ವಿವರ ನೀಡುವುದು) ?

## ಪ್ಲಾಸ್ಟಿಕ್ ಬಳಕೆಯ ನಿಷೇಧ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೩೬೮ (೫೨೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯವನ್ನು ಪ್ಲಾಸ್ಟಿಕ್ ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಮೇಲ್ವಿಚಾರಣೆಗೆ ಸರ್ಕಾರ ರಚಿಸಿರುವ ಸಮಿತಿ ಯಾವುದು ;

(ಇ) ಈ ಸಮಿತಿ ಎಂದಿನಿಂದ ಅಸ್ತಿತ್ವದಲ್ಲಿದೆ ಹಾಗೂ ಇದರ ಜವಾಬ್ದಾರಿಗಳೇನು ?



## ರೈಲ್ವೇ ಕೋಚ್ ಕಾರ್ಖಾನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೩೬೯ (೫೨೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ–ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ರೈಲ್ವೇ ಕೋಚ್ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರ ಯೋಚಿಸಿದೆಯೇ ;

(ಆ) ಯೋಚಿಸಿದ್ದಲ್ಲಿ, ಸದರಿ ಕೈಗಾರಿಕಾ ಘಟಕವನ್ನು ಪ್ರಾರಂಭಿಸಲು ಸ್ವಾಧೀನಪಡಿಸಿಕೊಂಡಿರುವ ಜಮೀನು ಎಷ್ಟು ;

(ಇ) ಇದರಲ್ಲಿ ಸರ್ಕಾರಿ, ಖಾಸಗಿ ಜಮೀನು ಎಷ್ಟು ;

(ಈ) ಸ್ವಾಧೀನಪಡಿಸಿಕೊಳ್ಳಲಾಗುವ ಖಾಸಗಿ ಜಮೀನಿಗೆ ಸರ್ಕಾರ ನಿಗದಿಪಡಿಸಿರುವ ಪರಿಹಾರ ಮೊತ್ತವೆಷ್ಟು ?

## ಕಲಬೆರಕೆ ಹಾಲು ದಂಧೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೩೭೦ (೫೨೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಯೂರಿಯಾ ಮತ್ತಿತರ ರಾಸಾಯನಿಕಗಳನ್ನೊಳಗೊಂಡ ಕಲಬೆರಕೆ ಹಾಲು ಮಾರಾಟದ ದಂಧೆ ಹೆಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ವಿಷಯುಕ್ತ ಕಲಬೆರಕೆ ಹಾಲು ಮಾರಾಟ ದಂಧೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಈ ಅಕ್ರಮದಲ್ಲಿ ತೊಡಗಿರುವ ಎಷ್ಟು ಜನ, ಕಂಪನಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆ ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಈ ಅಕ್ರಮವನ್ನು ತಡೆಗಟ್ಟಲು ಸರ್ಕಾರ ಕಾನೂನು ರೂಪಿಸಲು ಕ್ರಮ ಕೈಗೊಂಡಿದೆಯೇ (ಮಾಹಿತಿ ನೀಡುವುದು) ?

## ಹಸಿರು ಮಾಲೆ ಯೋಜನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೩೭೧ (೫೨೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) "ಹಸಿರು ಮಾಲೆ" ಯೋಜನೆಯಡಿ ಬಿ.ಡಿ.ಎ ವತಿಯಿಂದ ಬೆಂಗಳೂರು ನಗರ ಸುತ್ತಮುತ್ತ ಗಿಡ ನೆಡುವ ಕಾರ್ಯಕ್ರಮಕ್ಕೆ ಮೀಸಲಿಟ್ಟ ಅನುದಾನವೆಷ್ಟು ;

(ಆ) ಇಲ್ಲಿಯವರೆಗೂ ಬೆಂಗಳೂರು ನಗರ ಸುತ್ತಮುತ್ತ ಹಾಗೂ ಯಾವ ಯಾವ ಬಡಾವಣೆಗಳಲ್ಲಿ ಎಷ್ಟೆಷ್ಟು ಗಿಡಗಳನ್ನು ನೆಡಲಾಗಿದೆ ;

(ಇ) ಇಲ್ಲಿಯವರೆಗೂ ನೆಡಲಾಗಿರುವ ಗಿಡಗಳಿಗೆ ಎಷ್ಟು ಅನುದಾನವನ್ನು ವ್ಯಯಿಸಲಾಗಿದೆ ;

(ಈ) ಇನ್ನೂ ಎಷ್ಟು ಕಡೆ, ಎಷ್ಟು ಗಿಡಗಳನ್ನು ನೆಡಬೇಕಾಗಿದೆ ;

(ಉ) ಬಾಕಿ ಇರುವ ಅನುದಾನವೆಷ್ಟು ;



(ಊ) ಈ ಯೋಜನೆಯಡಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ಮಾಹಿತಿ ನೀಡುವುದು) ?

## ಜಾಹೀರಾತು ಫಲಕಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೩೭೨ (೫೨೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಜಾಹೀರಾತು ಫಲಕಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಸರ್ಕಾರಿ ಜಾಹೀರಾತು ಫಲಕಗಳು ಹಾಗೂ ಖಾಸಗಿ ಜಾಹೀರಾತು ಫಲಕಗಳು ಎಷ್ಟು ;

(ಇ) ಜಾಹೀರಾತು ಫಲಕಗಳಿಂದ ವಾರ್ಷಿಕ ಬರುವ ಆದಾಯವೆಷ್ಟು ;

(ಈ) ಜಾಹೀರಾತು ಫಲಕಗಳಿಗೆ ಶುಲ್ಕವನ್ನು ವಿಧಿಸುವಾಗ ಅನುಸರಿಸುವ ಮಾನದಂಡಗಳೇನು ;

(ಉ) ಜಾಹೀರಾತು ಫಲಕಗಳನ್ನು ಯಾವ–ಯಾವ ಸ್ಥಳಗಳಲ್ಲಿ ಅಳವಡಿಸಬೇಕೆಂದು ನಿಯಮಾವಳಿಗಳನ್ನು ರೂಪಿಸಲಾಗಿದೆಯೇ (ವಿವರ ನೀಡುವುದು) ;

(ಊ) ಅನಧಿಕೃತ ಜಾಹೀರಾತು ಫಲಕಗಳೆಷ್ಟು ; ಇವುಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) ?

## ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :–**

೩೭೩ (೫೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯನ್ನು ಬೆಳಗಾವಿಯಲ್ಲೇ ಸ್ಥಾಪಿಸಬೇಕೆಂದು ಇರುವ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕುರಿತು ಸರ್ಕಾರದ ಕ್ರಮ ಮತ್ತು ಯಾವ ಕಾಲಮಿತಿಯಲ್ಲಿ ನಿರ್ಣಯಿಸಲಾಗುವುದು ?

## ಕಾರ್ಪೊರೇಟ್ ಹೊಣೆಗಾರಿಕೆ ನೀತಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :–**

೩೭೪ (೫೨೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಪೊರೇಟ್ ಹೊಣೆಗಾರಿಕೆ ನೀತಿ ರಚನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದರೆ, ಅದರ ವಿವರಗಳೇನು ?



## ಅಕ್ರಮ ಶಸ್ತ್ರಾಸ್ತ್ರಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :–**

೩೭೫ (೫೨೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೨ ವರ್ಷಗಳಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಅಕ್ರಮ ಶಸ್ತ್ರಾಸ್ತ್ರಗಳನ್ನು ವಶ ಪಡಿಸಿಕೊಂಡಿರುವ ಪ್ರಕರಣಗಳು ಎಷ್ಟು ;

(ಆ) ಈ ರೀತಿಯ ಪಿಸ್ತೂಲು/ಬಂದೂಕುಗಳಿಂದ ಆಗಿರುವ ಕೊಲೆಗಳು ಎಷ್ಟು ;

(ಇ) ಇಂತಹ ಅನಧಿಕೃತ ಬಂದೂಕುಗಳು ಎಲ್ಲಿ ಸರಬರಾಜು ಆಗುತ್ತಿವೆಯೆಂದು ಪತ್ತೆಯಾಗಿದೆಯೇ ;

(ಈ) ಇದನ್ನು ಮಟ್ಟ ಹಾಕಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು ?

## ಕಾನೂನು ಪದವಿ ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವುದು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :–**

೩೭೬ (೫೨೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಾನೂನು ಪದವಿ ಕಾಲೇಜುಗಳಿಗೆ ಅನುದಾನ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಆ) ಅನುದಾನಕ್ಕೊಳಪಡಿಸಲು ಇರುವ ತೊಡಕುಗಳೇನು ;

(ಇ) ಯಾವ ಕಾಲಮಿತಿಯ ಒಳಗಡೆ ಯಾವ ಯಾವ ಕಾಲೇಜುಗಳನ್ನು ಅನುದಾನಕ್ಕೊಳಪಡಿಸಲಾಗುವುದು (ಪಟ್ಟಿ ನೀಡುವುದು) ?

## ಬೆಳಗಾವಿ ಸುವರ್ಣ ಸೌಧದ ಸದುಪಯೋಗ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :–**

೩೭೭ (೫೨೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಸುವರ್ಣ ಸೌಧದ ಬಳಿ ಶಾಸಕರ ಭವನ ಮತ್ತು ವಿವಿಧ ಇಲಾಖೆಗಳ ವಿಭಾಗೀಯ ಆಡಳಿತ ಕಛೇರಿ ನಿರ್ಮಿಸುವ ಕುರಿತು ಸರ್ಕಾರದ ನಿಲುವೇನು ;

(ಆ) ಸುವರ್ಣ ಸೌಧದ ನಿರಂತರ ಉಪಯೋಗಕ್ಕೆ ಸರ್ಕಾರದ ಕ್ರಮವೇನು ?

## ಕಂಬಳಕ್ಕೆ ಪರವಾನಗಿ ನೀಡದಿರುವುದು

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೮ (೫೩೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಉಡುಪಿಯಲ್ಲಿ ನಡೆಯುವ ಕಂಬಳಕ್ಕೆ ನಷೇಧ ಹೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಹಾಗಿದ್ದಲ್ಲಿ, ಈ ತುಳುನಾಡಿನ ಸಂಸ್ಕೃತಿಯ ಕಂಬಳಕ್ಕೆ ಪರವಾನಗಿಯನ್ನು ನೀಡದಿರಲು ಕಾರಣಗಳೇನು ;

(ಇ) ಕಂಬಳ ನಿಷೇಧಕ್ಕೆ ಪ್ರಾಣಿ ಹಿಂಸೆ ಕಾರಣ ಎನ್ನುವುದಾದರೆ ರೇಸ್‌ಗಳಲ್ಲಿ ಕುದುರೆಗಳಿಗೆ ಈ ನಿಯಮ ಅನ್ವಯಿಸುವುದಿಲ್ಲವೇ ;

(ಈ) ಹಾಗಿದ್ದಲ್ಲಿ, ಸರ್ಕಾರ ಕುದುರೆ ರೇಸ್‌ಗಳನ್ನು ನಿಷೇಧಿಸಲು ಕ್ರಮ ಕೈಗೊಳ್ಳುವುದೇ ;

(ಉ) ಎಷ್ಟು ಕಾಲಾವಕಾಶದಲ್ಲಿ ರಾಜ್ಯದಲ್ಲಿ ಕುದುರೆ ರೇಸ್ ನಿಷೇಧಿಸಲಾಗುವುದು ?

## ರಾಜಕಾಲುವೆಗಳ ಸ್ವಚ್ಛತಾ ಕಾರ್ಯ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೯ (೫೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ರಾಜಕಾಲುವೆಗಳ ಸ್ವಚ್ಛತಾ ಕಾರ್ಯ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜಕಾಲುವೆಗಳಲ್ಲಿ ಕಸ ಕಡ್ಡಿ ಸೇರಿಕೊಂಡು ರಸ್ತೆ–ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳುವುದು ;

(ಈ) ಸಾರ್ವಜನಿಕರಿಂದ ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಅನೇಕ ಬಾರಿ ಕಾಲುವೆ ಸ್ವಚ್ಛತೆ ಬಗ್ಗೆ ದೂರು ಕೊಟ್ಟರೂ ಅಧಿಕಾರಿ/ನೌಕರರು ಬೇಜವಾಬ್ದಾರಿತನ ತೋರಿರುವುದು ಸರ್ಕಾರ ಗಮನಿಸಿದೆಯೇ ;

(ಉ) ಹಾಗಾದಲ್ಲಿ, ಸರ್ಕಾರ ಕರ್ತವ್ಯ ಲೋಪವೆಸಗಿದ ಅಧಿಕಾರಿ/ನೌಕರರ ವಿರುದ್ಧ ಯಾವ ರೀತಿ ಕ್ರಮ ಜರುಗಿಸಿದೆ ?

## ಬೆಂಗಳೂರು ಮೆಟ್ರೋ ಕಾಮಗಾರಿ ವಿಳಂಬ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೮೦ (೫೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೆಟ್ರೋ ಯೋಜನೆಯ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮೊದಲ ಹಂತದ ಕಾಮಗಾರಿಗಳು ಪೂರ್ಣಗೊಳ್ಳುವುದು ಯಾವಾಗ ;

(ಇ) ಬೆಂಗಳೂರು ನಗರದ ಜನತೆ ಈ ಮಂದಗತಿಯ ಕಾಮಗಾರಿಗಳಿಂದ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರ ಮನಗಂಡಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರ ಮೆಟ್ರೋ ಕಾಮಗಾರಿಗಳನ್ನು ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಯೋಜನೆ ರೂಪಿಸಿದೆ ?



## ಬೀದಿ ನಾಯಿಗಳ ನಿಯಂತ್ರಣ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೮೧ (೫೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ಬೆಂಗಳೂರು ನಗರದ ಯಾವ ಯಾವ ಪ್ರದೇಶಗಳಲ್ಲಿ ಬೀದಿ ನಾಯಿಗಳ ದಾಳಿಗೆ ಮಕ್ಕಳು ಸೇರಿದಂತೆ ಎಷ್ಟು ಜನ ಸಾರ್ವಜನಿಕರು ಒಳಗಾಗಿದ್ದಾರೆ ;

(ಆ) ಬೀದಿ ನಾಯಿಗಳ ನಿಯಂತ್ರಣಕ್ಕೆ ಬಿ.ಬಿ.ಎಂ.ಪಿ. ಕೈಗೊಂಡ ಕ್ರಮಗಳೇನು ;

(ಇ) ನಗರದ ಸುಮಾರು ಬಡಾವಣೆಗಳಲ್ಲಿ ಬಿ.ಬಿ.ಎಂ.ಪಿ. ಸ್ವಚ್ಛತೆ ಕಾಪಾಡಿಕೊಳ್ಳಲು ವಿಫಲವಾಗಿರುವುದು ಮತ್ತು ಈ ರೀತಿಯ ನಾಯಿಗಳ ದಾಳಿಗೆ ಕಾರಣವಾಗಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ಹಾಗಿದ್ದಲ್ಲಿ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಮೇಲುಕೋಟೆ ಶ್ರೀ ನರಸಿಂಹಸ್ವಾಮಿ ದೇವಾಲಯದಲ್ಲಿ ಮೂಲ ಸೌಕರ್ಯಗಳು

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೮೨ (೫೩೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಸುಪ್ರಸಿದ್ಧ ಮೇಲುಕೋಟೆ ಶ್ರೀ ನರಸಿಂಹಸ್ವಾಮಿ ದೇವಾಲಯಕ್ಕೆ ಬರುವ ಭಕ್ತಾಧಿಗಳಿಗೆ ಕುಡಿಯುವ ನೀರು,

ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

## ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆ.ಎ.ಟಿ) ಸ್ಥಾಪನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೩೮೩ (೫೩೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರವು ರಾಜ್ಯದ ಎರಡನೇ ರಾಜಧಾನಿಯಾಗುವ ಎಲ್ಲಾ ಅರ್ಹತೆ ಹೊಂದಿದ ನಗರವಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಂದಾಯ ಇಲಾಖೆಯ ಬೆಳಗಾವಿ ವಿಭಾಗದಲ್ಲಿ ಬರುವ ಬೆಳಗಾವಿ, ಧಾರವಾಡ, ಬಿಜಾಪೂರ ಹಾಗೂ ಕಾರವಾರ ಜಿಲ್ಲೆಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪಿಸಬೇಕು ಎಂಬ ಆ ಭಾಗದ ಜನರ ಬೇಡಿಕೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬೆಳಗಾವಿಯಲ್ಲಿ ಕೆ.ಎ.ಟಿ ಸ್ಥಾಪಿಸಲು ಎಲ್ಲಾ ಮೂಲಭೂತ ಸೌಕರ್ಯ ಹೊಂದಿರುವುದರಿಂದ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

(ಈ) ಕೆ.ಎ.ಟಿ. ಸ್ಥಾಪನೆಗಾಗಿ ನಡೆಸಿದ ನಿರಂತರ ಹೋರಾಟಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರ ಮತ್ತು ಕಾನೂನು ಸಚಿವರು ತತಕ್ಷಣ ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪನೆಗೆ ಕ್ರಮ ಕೈಗೊಳ್ಳುವುದಾಗಿ



ನೀಡಿದ ಆಶ್ವಾಸನೆ ಈಗ ಯಾವ ಹಂತದಲ್ಲಿ ಇರುವುದು ಹಾಗೂ ಎಂದಿನಿಂದ ಕೆ.ಎ.ಟಿ. ಅಸ್ತಿತ್ವಕ್ಕೆ ಬರುವುದು ;

(ಉ) ರಾಜ್ಯದಲ್ಲಿ ಕೆ.ಎ.ಟಿ. ಎಷ್ಟು ಕೇಸುಗಳು ಬಾಕಿ ಇರುತ್ತವೆ (ಪ್ರತಿಯೊಂದು ಜಿಲ್ಲಾವಾರು ಮಾಹಿತಿ ನೀಡುವುದು) ?

## ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಶೀಘ್ರ ವಿಚಾರಣೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೩೮೪ (೫೩೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ವಿಚಾರಣೆಗಾಗಿ ಬಾಕಿ ಇವೆ (ಬೆಂಗಳೂರು, ಧಾರವಾಡ ಕಲಬುರ್ಗಿ ನ್ಯಾಯಾಲಯಗಳ ಪ್ರತ್ಯೇಕ ಮಾಹಿತಿ ನೀಡುವುದು) ;

(ಆ) ಅವುಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಕೇಸ್‌ಗಳು ಪ್ರತಿಯೊಂದು ಹೈಕೋರ್ಟ್‌ಗಳಲ್ಲಿ ವಿಚಾರಣೆಗಾಗಿ ಎಷ್ಟು ಪೆಂಡಿಂಗ್ ಇವೆ ;

(ಇ) ಪ್ರತಿಯೊಂದು ಹೈಕೋರ್ಟ್‌ಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳನ್ನು ತುಂಬಲು ವಿಳಂಬವಾಗುತ್ತಿರುವುದರಿಂದ ಕೇಸ್‌ಗಳ ಹೆಚ್ಚಿಗೆ ಇತ್ಯರ್ಥ ಆಗದೇ ಬಾಕಿ ಉಳಿಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಪ್ರತಿಯೊಂದು ಹೈಕೋರ್ಟ್‌ಗಳಲ್ಲಿ ಬಾಂಬೆ ಕರ್ನಾಟಕ ಭಾಗದ ನ್ಯಾಯಾಧೀಶರು ಎಷ್ಟು ಜನರಿದ್ದಾರೆ ;

(ಉ) ಕೆಳಗಿನ ಕೋರ್ಟ್‌ಗಳಲ್ಲಿ ಅಂದರೆ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕೋರ್ಟುಗಳಲ್ಲಿ ಎಷ್ಟು ಕೇಸ್‌ಗಳು ವಿಚಾರಣೆಗಾಗಿ ಬಾಕಿ ಇರುತ್ತವೆ ;

(ಊ) ಕೋರ್ಟ್‌ಗಳಲ್ಲಿ ಶೀಘ್ರ ವಿಲೇವಾರಿ ಮಾಡುವ ಸಲುವಾಗಿ Fast Track ಕೋರ್ಟ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಹೊಸ ಪಶುವೈದ್ಯ ಕಾಲೇಜುಗಳ ಸ್ಥಾಪನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೩೮೫ (೫೩೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸದಾಗಿ ಮೂರು ಪಶು ವೈದ್ಯಕೀಯ ಮಹಾವಿದ್ಯಾಲಯಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ; ಹಾಗೂ ಯಾವ ಯಾವ ಸ್ಥಳಗಳಲ್ಲಿ : ಪ್ರಾರಂಭಿಸಲು ಸಂಬಂಧಿಸಿದವರ ಒಪ್ಪಿಗೆ ದೊರೆತಿರುವುದೇ ;

(ಆ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಎಲ್ಲ ಮೂಲಭೂತ ಸೌಕರ್ಯ ಹೊಂದಿದ್ದು, ಇಲ್ಲಿ ಪ್ರಾರಂಭಿಸಲು ಪರಿಶೀಲಿಸಲಾಗುವುದೇ ;

(ಇ) ಧಾರವಾಡ ಜಿಲ್ಲೆಯ ತೆಗೂರು ಹತ್ತಿರ (ಕಿತ್ತೂರ ಬಾರ್ಡರ್) ಎಮ್ಮೆಗಳ ತಳಿ ಅಭಿವೃದ್ಧಿ ಕೇಂದ್ರವಿದ್ದು, ಅಲ್ಲಿ ಸಮೀಪ ಪಶು ವೈದ್ಯಕೀಯ ಸಂಬಂಧಿಸಿದ ಕೋರ್ಸ್‌ಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದೇ ?



## ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೬ (೫೩೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು (ವಿವರ ನೀಡುವುದು) ;

(ಆ) ಪ್ರಮುಖವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಹಾಗೂ ಹಾಲಿ ಇರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ನೀಡುತ್ತಿರುವ ಸೌಲಭ್ಯಗಳೇನು;

(ಇ) ಹಾಗಾದರೆ, ಈ ಕೈಗಾರಿಕೆಗಳಿಗೆ ನೀಡುತ್ತಿರುವ ಸಹಾಯಧನವನ್ನು ಹೆಚ್ಚಳ ಮಾಡಲು ಹಾಗೂ ಸದರಿ ಸಹಾಯಧನದ ಮೇಲಿನ ಬಡ್ಡಿ ದರವನ್ನು ಕಡಿಮೆ ಮಾಡಲು ಸರ್ಕಾರವು ಚಿಂತಿಸಿದೆಯೇ;

(ಈ) ಸರ್ಕಾರವು ಕಳೆದ ಆಯವ್ಯಯದಲ್ಲಿ, ಜಿಲ್ಲಾ ಕೇಂದ್ರಗಳ ಮುಖಾಂತರ ಗ್ರಾಮೀಣ ಪ್ರದೇಶಗಳಲ್ಲಿ ರೂ:೧೦ ಲಕ್ಷಗಳ ಮೊತ್ತದವರೆಗೆ ಬಂಡವಾಳ ಹೂಡಿ ಸೂಕ್ಷ್ಮ ಕೈಗಾರಿಕೆಗಳನ್ನು ಸ್ಥಾಪಿಸುವುದಾಗಿ ಘೋಷಿಸಿರುವಂತೆ, ಗ್ರಾಮೀಣ ಪ್ರದೇಶಗಳಲ್ಲಿ ಇದುವರೆವಿಗೂ ಎಷ್ಟು ಸೂಕ್ಷ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) ?

## ಪುಣ್ಯ ಕ್ಷೇತ್ರಗಳಿಗೆ ಉಚಿತ ವ್ಯವಸ್ಥೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೬(ಎ) (೫೩೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಸ್ಲಿಂ ಸಮುದಾಯದವರಿಗೆ ಹಜ್ ಯಾತ್ರೆಯ ಸೌಲಭ್ಯ ಕಲ್ಪಿಸಿದ ಮಾದರಿಯಲ್ಲಿ, ಲಿಂಗಾಯತ ಸಮಾಜದವರಿಗೆ ಪವಿತ್ರ ಕ್ಷೇತ್ರಗಳಾದ ಕಾಶಿ, ಶ್ರೀಶೈಲ, ಕೂಡಲಸಂಗಮ, ಶ್ರೀಶಿವಯೋಗ ಮಂದಿರ ೧೨ ಜ್ಯೋತಿರ್ಲಿಂಗ ಮುಂತಾದ ಸ್ಥಳಗಳಿಗೆ ಉಚಿತವಾಗಿ ಹೋಗಿ ಬರಲು ಸರ್ಕಾರ ಅವಕಾಶ ಕಲ್ಪಿಸಿ ಸಹಾಯ ಮಾಡಲಾಗುವುದೇ;

(ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ, ಮಹಾರಾಷ್ಟ್ರ ರಾಜ್ಯದ ನಾಗಪೂರದಲ್ಲಿರುವ ದೀಕ್ಷಾ ಭೂಮಿಗೆ ಹೋಗಿ ಬರಲು ಉಚಿತ ಯಾತ್ರೆ ಆಯೋಜಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವರು ಹೇಳಿದಂತೆ, ಲಿಂಗಾಯತರಿಗೂ ಸಹ ತಮ್ಮ ಧಾರ್ಮಿಕ ಸ್ಥಳಗಳಿಗೆ ಹೋಗಿ ಬರಲು ಉಚಿತ ಸಹಾಯ ಮಾಡಲಾಗುವುದೇ ?

## ಪಶು ಆಸ್ಪತ್ರೆಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೮೭ (೫೪೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ/ ಗ್ರಾಮಾಂತರ ಜಿಲ್ಲೆಗಳಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ;



(ಆ) ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಪಶು ಆಸ್ಪತ್ರೆಗಳು ಇವೆಯೇ; ಇಲ್ಲದಿದ್ದ ಪಕ್ಷದಲ್ಲಿ, ಈ ಪಶು ಆಸ್ಪತ್ರೆಗಳನ್ನು ಹೊಸದಾಗಿ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಇ) ಕಳೆದ ೦೩ ವರ್ಷಗಳಿಂದ ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಪಶುಸಂಗೋಪನಾ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಿದ ಯೋಜನೆಗಳಾವುವು; ವೆಚ್ಚ ಮಾಡಿದ ಹಣವೆಷ್ಟು ?

## ಬೆಂಗಳೂರು ನಗರದಲ್ಲಿ ಗೂಂಡಾ ಕಾಯ್ದೆಯ ಪ್ರಕರಣಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೮೮ (೫೪೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಕಳೆದ ೦೩ ವರ್ಷಗಳಿಂದ ಇಲ್ಲಿಯವರೆವಿಗೆ ಎಷ್ಟು ಜನರ ಮೇಲೆ ಗೂಂಡಾ ಕಾಯ್ದೆಯನ್ವಯ ಪ್ರಕರಣಗಳನ್ನು ದಾಖಲಾಗಿಸಿದೆ ;

(ಆ) ಗೂಂಡಾ ಕಾಯ್ದೆಯನ್ನು ಅನ್ವಯಿಸಲು ವಿಧಿಸುವ ಸರ್ಕಾರದ ಮಾನದಂಡಗಳೇನು ;

(ಇ) ಗೂಂಡಾ ಕಾಯ್ದೆಯನ್ನು ಹಾಕಿರುವ ಪ್ರಕರಣಗಳಲ್ಲಿ ನ್ಯಾಯಾಲಯಗಳು ಎಷ್ಟು ತಡೆಯಾಜ್ಞೆಯನ್ನು ನೀಡಿವೆ (ವಿವರಗಳನ್ನು ನೀಡುವುದು) ?

## ಬಿ.ಬಿ.ಎಂ.ಪಿ. ವತಿಯಿಂದ ಬೆಂಗಳೂರು ನಗರದಲ್ಲಿ ತಲೆ ಎತ್ತಿರುವ ಕಟ್ಟಡಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೮೯ (೫೪೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಳೆದ ೧೫ ವರ್ಷಗಳಿಂದ ಅನಧಿಕೃತವಾಗಿ ತಲೆ ಎತ್ತಿರುವ ಕಟ್ಟಡಗಳನ್ನು ಗುರುತಿಸಿ ಕೆಡವಲಾದ ಕಟ್ಟಡಗಳ ಸಂಖ್ಯೆ ಎಷ್ಟು ;

(ಆ) ಹೀಗೆ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುವವರ ವಿರುದ್ಧ ಎಷ್ಟು ಮೊಕದ್ದಮೆಗಳನ್ನು ದಾಖಲಿಸಿದೆ (ವಿವರಗಳನ್ನು ನೀಡುವುದು) ?

## ಕುಡಿಯುವ ನೀರಿನ ಸೋರಿಕೆ ಹಾಗೂ ಅನಧಿಕೃತ ಸಂಪರ್ಕಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೦ (೫೪೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ವತಿಯಿಂದ ಬೆಂಗಳೂರಿನ ನಾಗರೀಕರಿಗೆ ನೀರನ್ನು ಸರಬರಾಜು ಮಾಡುವಾಗ ಸೋರುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಪ್ರಸ್ತುತ ಸೋರಿಕೆಯಾಗುತ್ತಿರುವ ನೀರಿನ ಪ್ರಮಾಣವೆಷ್ಟು; ಅನಧಿಕೃತವಾಗಿ ಈ ನೀರಿನ ಸಂಪರ್ಕವನ್ನು ಹೊಂದಿರುವವರ ವಿರುದ್ಧ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;



(ಇ) ಹೀಗೆ ಸೋರಿಕೆಯಾದ ನೀರಿನ ಪ್ರಮಾಣವನ್ನು ಅಂದಾಜು ಮಾಡಲು ಹಾಗೂ ಸೋರಿಕೆಯನ್ನು ತಡೆಗಟ್ಟಲು ಸರ್ಕಾರವು ಯಾವ ಏಜೆನ್ಸಿಗೆ ಗುತ್ತಿಗೆ ನೀಡಿದೆ ?

## ಆರ್ಥಿಕ ಮಿತವ್ಯಯ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೩೯೧ (೫೫೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರ್ಥಿಕ ಮಿತವ್ಯಯ ಎಂದರೇನು (ವಿವರ ನೀಡುವುದು) ;

(ಆ) ರಾಜ್ಯದಲ್ಲಿ ಎಂದಿನಿಂದ ಆರ್ಥಿಕ ಮಿತವ್ಯಯ ಜಾರಿಯಲ್ಲಿದೆ; ಆರ್ಥಿಕ ಮಿತವ್ಯಯ ಜಾರಿಗೆ ತರಲು ಪ್ರಮುಖ ಕಾರಣವೇನು (ವಿವರ ನೀಡುವುದು) ;

(ಇ) ಆರ್ಥಿಕ ಮಿತವ್ಯಯ ಇಲಾಖೆಯ ಯಾವ ಉದ್ದೇಶಗಳಿಗೆ (ಕಾರ್ಯಕ್ರಮ/ಯೋಜನೆ) ಅನ್ವಯಿಸುತ್ತದೆ ;

(ಈ) ಸದರಿ ಆರ್ಥಿಕ ಮಿತವ್ಯಯದಿಂದ ಯಾವುದಾದರೂ ಇಲಾಖೆಗೆ ವಿನಾಯಿತಿ ನೀಡಲಾಗಿದೆಯೇ (ವಿವರ ನೀಡುವುದು) ;

(ಉ) ಸರ್ಕಾರದ ಹೊಸ ಯೋಜನೆ/ಕಾರ್ಯಕ್ರಮಗಳಿಗೆ ಆರ್ಥಿಕ ಮಿತವ್ಯಯ ಅನ್ವಯಿಸುವುದಿಲ್ಲವೆ ;

(ಊ) ಎಂದಿನವರೆಗೆ ಆರ್ಥಿಕ ಮಿತವ್ಯಯು ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ ?

## ಪೊಲೀಸ್ ಅಧಿಕಾರಿಗಳ ಬಡ್ತಿಯಲ್ಲಿ ವಿಳಂಬ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೩೯೨ (೫೫೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಬ್ ಇನ್ಸ್‌ಪೆಕ್ಟರ್ ಹುದ್ದೆಯಿಂದ ಹೆಚ್ಚುವರಿ ಸೂಪರಿನ್‌ಟೆಂಡೆಂಟ್ ಆಫ್ ಪೊಲೀಸ್ ಹುದ್ದೆಯವರೆಗೆ ಬಡ್ತಿ ನೀಡುವಲ್ಲಿ ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿಳಂಬದಿಂದ ಕೆಲವು ಅಧಿಕಾರಿಗಳು ಬಡ್ತಿಯಿಂದ ವಂಚಿತರಾಗಿ ವಯೋನಿವೃತ್ತಿ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಹುದ್ದೆಗಳಿಗೆ ಇಲಾಖೆಯ ನಿಯಮಾವಳಿಗಳಂತೆ ಕಾಲಕಾಲಕ್ಕೆ ಬಡ್ತಿ ನೀಡಲು ಇರುವ ತೊಂದರೆಗಳೇನು (ವಿವರ ನೀಡುವುದು) ;

(ಈ) ವಿಳಂಬವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) ?

## ಪಿಪಿಪಿ ಯೋಜನೆಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೩ (೫೬೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯಗತಗೊಳಿಸುತ್ತಿರುವ ಪಿಪಿಪಿ (Public Private & Participate) ಯೋಜನೆಗಳಾವುವು ;



(ಆ) ಈ ಪಿಪಿಪಿ ಯೋಜನೆಗಳಲ್ಲಿ ಇಷ್ಟು ಯೋಜನೆಗಳು ನಿಗದಿತ ಸಮಯದಲ್ಲಿ ಪೂರ್ಣಗೊಂಡಿವೆ; ಪ್ರಸ್ತುತ ಗುರುತಿಸಿರುವ ಯೋಜನೆಗಳು, ಚಾಲ್ತಿಯಲ್ಲಿರುವ ಯೋಜನೆಗಳು ಹಾಗೂ ನಿರ್ಣಾಯಕ ಹಂತದಲ್ಲಿರುವ ಯೋಜನೆಗಳ ಬಗ್ಗೆ ಮಾಹಿತಿ ಮತ್ತು ಅಂದಾಜು ವೆಚ್ಚವೆಷ್ಟು (ವಿವರಗಳನ್ನು ನೀಡುವುದು) ?

## ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂಗ್ರಹವಾಗಿರುವ ಹಣ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೪ (೫೫೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೦೫ ವರ್ಷಗಳಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ವಿವಿಧ ಮೂಲಗಳಿಂದ ಸಂಗ್ರಹವಾಗಿರುವ ಹಣದ ಮೊತ್ತವೆಷ್ಟು; ಹಾಗೂ ಸರ್ಕಾರದ ಅನುದಾನದಿಂದ ಈ ನಿಧಿಗೆ ಒದಗಿಸಲಾದ ಹಣವೆಷ್ಟು;

(ಆ) ಐದು ವರ್ಷಗಳ ಅವಧಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿದೆ ಹಾಗೂ ಇದರ ಒಟ್ಟು ಮೊತ್ತವೆಷ್ಟು ; ಇನ್ನೂ ವಿಲೇವಾರಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ?

## ಸ್ವಾಧೀನಪಡಿಸಿಕೊಂಡು ನಂತರ ಕೈಬಿಡಲಾದ ಜಮೀನುಗಳು

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೫ (೫೬೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವರ್ತೂರು ಹೋಬಳಿಯ ಬೆಳ್ಳಂದೂರು, ದೇವರ ಬಿಸನಹಳ್ಳಿ, ಕರಿಯಮ್ಮನ ಅಗ್ರಹಾರ ಗ್ರಾಮಕ್ಕೆ ಸೇರಿರುವ

ಎಷ್ಟು ಎಕರೆ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ (ವಿವರ ನೀಡುವುದು) ;

(ಆ) ಈ ರೀತಿಯಾಗಿ ಸರ್ಕಾರದ ವತಿಯಿಂದ ಸ್ವಾಧೀನಪಡಿಸಿ ಕೊಂಡಿರುವ ಜಮೀನುಗಳು ಯಾವ ಯಾವ ಪ್ರಾಜೆಕ್ಟ್‌ಗಳಿಗಾಗಿ ಉದ್ದೇಶಿಸಲಾಗಿದೆ (ಸರ್ಕಾರದ ವತಿಯಿಂದ ಸ್ವಾಧೀನ ಪಡಿಸಿಕೊಂಡಿದ್ದು ತದನಂತರ ಕೈಬಿಟ್ಟಿರುವ ಜಮೀನುಗಳ ವಿವರ ನೀಡುವುದು) ?

## ನಗರದ ಬಹುಮಹಡಿಗಳ ಕಟ್ಟಡಗಳಿಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆ.

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):–**

೩೯೬ (೫೬೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಬಹುಮಹಡಿಗಳ ಕಟ್ಟಡಗಳನ್ನು ಕಟ್ಟುವ ನಿಟ್ಟಿನಲ್ಲಿ ಸದರಿ ಕಟ್ಟಡಗಳಿಗೆ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ನಿರಾಕ್ಷೇಪಣಾ ಪತ್ರ ನೀಡಿರುವ ಕಟ್ಟಡಗಳ ಸಂಖ್ಯೆ ಎಷ್ಟು;

(ಆ) ಈ ರೀತಿಯಾಗಿ ಬಹುಮಹಡಿಗಳ ಕಟ್ಟಡಗಳನ್ನು ಕಟ್ಟುವ ನಿಟ್ಟಿನಲ್ಲಿ ಮಾಲೀಕರುಗಳಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ನಿಯಮಾನುಸಾರ ಹಣವನ್ನು ಸಂಗ್ರಹಿಸಿ ತದನಂತರ ನಿರಾಕ್ಷೇಪಣಾ ಪತ್ರ ನೀಡಿ ಕಟ್ಟಡಗಳು ಪೂರ್ಣಗೊಂಡರೂ ಈವರೆವಿಗೂ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸದೇ



ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಕಟ್ಟಡಗಳಿಗೆ ಈ ರೀತಿಯಾಗಿದೆ ಈ ನಿಟ್ಟಿನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರಿಗೆ ಸಂದಾಯವಾಗಿರುವ ಮೊತ್ತವೆಷ್ಟು (ವಿವರ ನೀಡುವುದು) ;

(ಇ) ಬಹುಮಹಡಿಗಳ ಕಟ್ಟಡಗಳನ್ನು ಕಟ್ಟುವ ನಿಟ್ಟಿನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ವಿಳಂಬ ಧೋರಣೆಯನ್ನು ಮಾಡುತ್ತಿರುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಸ್ವಾಧೀನಪಡಿಸಿಕೊಂಡಿರುವ ಜಮೀನು.

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):–**

೩೯೭ (೫೬೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಕೆ.ಆರ್.ಪುರಂ ಹೋಬಳಿಯ ಸಾದರಮಂಗಳ, ಪಟ್ಟಂದೂರು ಗ್ರಾಮದಲ್ಲಿ ಎಷ್ಟು ಎಕರೆ ಜಮೀನನ್ನು ಸರ್ಕಾರವು ಸ್ವಾಧೀನ ಪಡಿಸಿಕೊಂಡಿದೆ (ವಿವರ ನೀಡುವುದು) ;

(ಆ) ಈ ರೀತಿಯಾಗಿ ಮೇಲ್ಕಂಡ ಜಾಗದಲ್ಲಿ ಸರ್ಕಾರದ ವತಿಯಿಂದ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳು ಯಾವ ಯಾವ ಪ್ರಾಜೆಕ್ಟ್‌ಗಳಿಗಾಗಿ ಉದ್ದೇಶಿಸಲಾಗಿದೆ (ಸರ್ಕಾರದ ವತಿಯಿಂದ ಸ್ವಾಧೀನ ಪಡಿಸಿಕೊಂಡಿದ್ದು ತದನಂತರ ಕೈಬಿಟ್ಟಿರುವ ಜಮೀನುಗಳ ವಿವರ ನೀಡುವುದು) ?

## ಭೂ ಬದಲಾವಣೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೩೯೮ (೫೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಿಂದ ಬೆಂಗಳೂರು ಸಿ.ಡಿ.ಪಿ ನಗರ ಅಭಿವೃದ್ಧಿ ಯೋಜನೆಯಂತೆ ಹಸಿರುಪಟ್ಟಿ ಕೈಗಾರಿಕೆಗಳು ಹಾಗೂ ಪಾರ್ಕ್‌ಗಳು ಸೇರಿದಂತೆ ಭೂ ಬದಲಾವಣೆ ಮಾಡಲಾಗಿದೆಯೇ ;

(ಆ) ೪:೧ ಮತ್ತು ೬:೧ ಆಗಿರುವಂತೆ ಪ್ರಕರಣಗಳಲ್ಲಿ ಹೊಸದಾಗಿ ಭೂಸ್ವಾಧೀನವಾಗಿರುವ ಬಡಾವಣೆಗಳನ್ನು ಕೈಬಿಡಲಾಗಿದಿಯೇ ;

(ಇ) ಸಿ.ಡಿ.ಪಿ.ಯಲ್ಲಿ ಹಸಿರುಪಟ್ಟಿ ಇರುವಂತಹ ಕೃಷಿ ಭೂಮಿಗಳಲ್ಲಿ ಅಕ್ರಮವಾಗಿ ಲೇಔಟ್‌ಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದಿಂದ ಏನು ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು) ;

(ಉ) ಸಿ.ಡಿ.ಪಿ ಬದಲಾವಣೆ ಯಾವಾಗ ಮಾಡಲಾಗುವುದು ?



## ಗಣಿಗಾರಿಕೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೩೯೯ (೫೬೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಕೋರಿ ಇಲ್ಲಿಯವರೆಗೆ ಸಲ್ಲಿಸಿರುವ ಅರ್ಜಿಗಳು ಎಷ್ಟು (ವಿವಿಧ ರೀತಿಯ ಗಣಿಗಾರಿಕೆಗೆ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳ/ ಅರ್ಜಿದಾರರ ವಿವರಗಳನ್ನು ಜಿಲ್ಲಾವಾರು ನೀಡುವುದು) ;

(ಆ) ವಿವಿಧ ರೀತಿಯ ಗಣಿಗಾರಿಕೆ ನಡೆಸಲು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾರು ಯಾರಿಗೆ ಅನುಮತಿ ನೀಡಲಾಗಿದೆ; ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ;

(ಇ) ರಾಜ್ಯದಲ್ಲಿ ಈ ರೀತಿಯ ಗಣಿಗಾರಿಕೆ ಅನುಮತಿ ನೀಡಿರುವ ಅರ್ಜಿದಾರರು ಮತ್ತು ಅನುಮತಿ ನೀಡಿರುವ ಪ್ರದೇಶವೆಷ್ಟು (ನೀಲಿ ನಕ್ಷೆ ಸಹಿತ ವಿವರ ನೀಡುವುದು) ;

(ಈ) ಗಣಿಗಾರಿಕೆ ಅನುಮತಿ ನೀಡದೆ ಇತ್ಯರ್ಥವಾಗದೆ, ಉಳಿದಿರುವ ಕಡತಗಳೆಷ್ಟು (ವಿವರ ನೀಡುವುದು) ;

(ಉ) ಇತ್ತೀಚಿನ ದಿನಗಳಲ್ಲಿ ಅನುಮತಿ ನೀಡಲು ಸರ್ಕಾರ ಯೋಚಿಸಿದೆಯೇ ಯಾವಾಗ ಅನುಮತಿ ನೀಡಲಾಗುವುದು ?

## ಬಡ ಕೂಲಿ ಕಾರ್ಮಿಕರ ಅಭಿವೃದ್ಧಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೪೦೦ (೫೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ನೇಕಾರಿಕೆ ಮಾಡುವ ಕೂಲಿ ಕಾರ್ಮಿಕ ನೇಕಾರರು ಹಾಗೂ ಬಡ ನೇಕಾರರು ವಸತಿ ನಿವೇಶನ ಹಾಗೂ ವಸತಿ ಇಲ್ಲದೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಾವಿರಾರು ಬಡ ನೇಕಾರರು ನಗರಸಭೆಗೆ ನಿವೇಶನ ನೀಡುವಂತೆ ಮನವಿ ಮಾಡಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ಇತ್ತೀಚಿನ ದಿನಗಳಲ್ಲಿ ಬೆಳಗಾವಿ ಜಿಲ್ಲೆ ಹಾಗೂ ನಗರದಲ್ಲಿ ನೇಕಾರರಿಗೆ ಹೊಸದಾಗಿ ನೇಕಾರಿಕೆಗೆ ಹಾಗೂ ವಿದ್ಯುತ್ ಮಗ್ಗಗಳಿಗೆ ಪರವಾನಗಿ ಅನುಮತಿ ಕೊಡದಿರುವ ಕಾರಣ, ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ವತಿಯಿಂದ ಹೊಸ ನೇಕಾರ ಬಡಾವಣೆ ಮಾಡಿ ಈ ನೇಕಾರರುಗಳಿಗೆ ಅನುಕೂಲ ಮಾಡಿಕೊಡಲಾಗುವುದೇ;

(ಈ) ಹಲವಾರು ವರ್ಷಗಳಿಂದ ಬೆಳಗಾವಿ ವಿಭಾಗದಲ್ಲಿ ಯಾವುದೇ ನೇಕಾರರ ಸಮಸ್ಯೆಗೆ ಇದುವರೆಗೆ ಸರ್ಕಾರ ಸ್ಪಂದಿಸದಿರುವುದರಿಂದ ಈ ಬಾರಿಯಾದರೂ ಈ ಎಲ್ಲಾ ಅನುಕೂಲ ಮಾಡಿಕೊಡಲಾಗುವುದೇ ?



## ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಸ್ಥಾಪನೆಗೆ ಮಾಡಿಕೊಂಡಿರುವ ಒಡಂಬಡಿಕೆ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೪೦೧ (೫೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦೦೮ ರಿಂದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ಒಡಂಬಡಿಕೆ (ಎಂ.ಓ.ಯು)ಗಳನ್ನು ಮಾಡಿಕೊಳ್ಳಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಒಡಂಬಡಿಕೆ ಮಾಡಿಕೊಂಡ ಕೈಗಾರಿಕೆಗಳಿಂದ ಹೂಡಿಕೆಯಾದ ಬಂಡವಾಳವೆಷ್ಟು; ಯಾವ ಯಾವ ಉದ್ದಿಮೆಗಳು ಪ್ರಾರಂಭವಾಗಿವೆ; ಎಷ್ಟು ಉದ್ಯೋಗಗಳನ್ನು ನೇಮಿಸಿಕೊಳ್ಳಲಾಗಿದೆ;

(ಇ) ಒಡಂಬಡಿಕೆ ಮಾಡಿಕೊಂಡ ಉದ್ದಿಮೆದಾರರಿಗೆ ೧೦ ಎಕರೆಗಿಂತ ಹೆಚ್ಚು ಜಮೀನನ್ನು ಯಾವ ಯಾವ ಕೈಗಾರಿಕಾ ಪ್ರದೇಶದಲ್ಲಿ ನೀಡಲಾಗಿದೆ; ಉದ್ದಿಮೆದಾರರು ಜಮೀನನ್ನು ಸದ್ಬಳಕೆ ಮಾಡಿಕೊಂಡಿದ್ದಾರೆಯೇ;

(ಈ) ಸದ್ಬಳಕೆ ಮಾಡಿಕೊಳ್ಳದೇ ಇರುವ ಉದ್ದಿಮೆದಾರರಿಂದ ಸರ್ಕಾರ ಜಮೀನನ್ನು ವಾಪಸ್ಸು ಪಡೆಯಲು ಕಾಲಮಿತಿ ಹಾಕಿಕೊಳ್ಳಲಾಗಿದೆಯೇ;

(ಉ) ಈ ಕೈಗಾರಿಕಾ ಒಡಂಬಡಿಕೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (Foreign Direct Investment) ಸೇರಿದೆಯೇ;

(ಊ) ಇದರಿಂದ ರಾಜ್ಯದ ನಿರುದ್ಯೋಗಿ ಯುವಕರಿಗೆ ಅನುಕೂಲವಾಗಿದೆಯೇ (ವಿವರ ನೀಡುವುದು) ?

## ಲೋಕಾಯುಕ್ತ ತನಿಖೆ ವಿವರ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೦೨ (೫೭೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಿನಾಂಕ: ೧೦.೦೧.೨೦೦೫ ರಿಂದ ಇಲ್ಲಿಯವರೆಗೆ ಎಷ್ಟು ನೇಮಕಾತಿ, ವೈಪರೀತ್ಯ, ಅಕ್ರಮಗಳ ಪ್ರಕರಣಗಳನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ೧೯೮೪ ಕಲಂ ೭(೨ಎ) ಅಡಿಯಲ್ಲಿ ಸರ್ಕಾರವು ಲೋಕಾಯುಕ್ತ ಸಂಸ್ಥೆಗೆ ವಹಿಸಲಾಗಿದೆ (ಇಲಾಖಾವಾರು ವರ್ಷವಾರು ಮಾಹಿತಿ ನೀಡುವುದು) ;

(ಆ) ಈ ರೀತಿ ವಹಿಸಿದ ಪ್ರಕರಣಗಳಲ್ಲಿ ಲೋಕಾಯುಕ್ತ ಸಂಸ್ಥೆಯು ಎಷ್ಟು ಪ್ರಕರಣಗಳಿಗೆ ಪರಿಶೀಲನೆ ಮಾಡಿ ವರದಿ ನೀಡಿರುತ್ತದೆ ಎಷ್ಟು ಪ್ರಕರಣಗಳನ್ನು ವ್ಯಾಪ್ತಿಗೆ ಬರುವುದಿಲ್ಲವೆಂದು ಸರ್ಕಾರಕ್ಕೆ ಹಿಂತಿರುಗಿಸಿರುತ್ತದೆ ;

(ಇ) ಲೋಕಾಯುಕ್ತ ಕಂಪ್ಲೇಂಟ್ ನಂ. ೪೨೪/೨೦೦೮ ಪ್ರಕರಣವನ್ನು ಮಾನ್ಯ ಲೋಕಾಯುಕ್ತರು ೫ ವರ್ಷಗಳ ಬಳಿಕ ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಸರ್ಕಾರಕ್ಕೆ ಹಿಂತಿರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಈ) ಲೋಕಾಯುಕ್ತ ಕಂಪ್ಲೇಂಟ್ ನಂ. ೪೨೪/೨೦೦೮ ಪ್ರಕರಣವನ್ನು ಮಾನ್ಯ ಲೋಕಾಯುಕ್ತರು ದಿನಾಂಕ: ೧೦.೦೬.೨೦೦೯ ರಂದು ದಿನಪತ್ರಿಕೆಯಲ್ಲಿ ಸಾರ್ವಜನಿಕ ತಿಳುವಳಿಕೆ ಪತ್ರ ನೀಡಿ ನಂತರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿರುವುದು ಸಮಂಜಸವೇ;



(ಉ) ಇದರಿಂದ ೧೫ ಜನ ಗ್ರಾಮೀಣ ಪದವೀಧರ ಅಭ್ಯರ್ಥಿಗಳಿಗೆ ಸರ್ಕಾರಿ ಕೆಲಸ ಕೈ ತಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದರೆ, ಇವರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು;

(ಊ) ಸರ್ಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ೧೯೮೪ ಕಲಂ ೭(೨ಎ) ಅಡಿ ಪರಿಶೀಲನೆ ಮಾಡಿ ವರದಿ ನೀಡಲು ಕಳುಹಿಸಿದ ಪ್ರಕರಣಗಳನ್ನು ಸಂಸ್ಥೆಯು ವಾಪಸ್ಸು ಕಳಿಸದಂತೆ ಕಾಯ್ದೆಯ u/s 8(1)(a) r/w 2nd Schedule ನಲ್ಲಿ ತಿದ್ದುಪಡಿ ಮಾಡಲು ಸರ್ಕಾರವು ಏನು ಕ್ರಮ ಕೈಗೊಂಡಿದೆ ?

## ಮೆಟ್ರೋ ನೌಕರರ ವೇತನ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೦೩ (೫೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (BMRCL) ರಲ್ಲಿ ಅನ್ಯ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ನೀಡುವುದು (ಸಿಬ್ಬಂದಿ ಹೆಸರು, ಮಾತೃ ಇಲಾಖೆಯಲ್ಲಿನ ಹುದ್ದೆಯ ಪದನಾಮ, ಅಲ್ಲಿನ ವೇತನ ಶ್ರೇಣಿ, BMRCL ನಲ್ಲಿ ಅವರು ಸೇರಿದ ದಿನಾಂಕ, ಹಾಲಿ ಹೊಂದಿರುವ ಹುದ್ದೆಯ ಪದನಾಮ, ವೇತನ ಶ್ರೇಣಿ, ಒಟ್ಟು ಪಡೆಯುತ್ತಿರುವ ವೇತನ ವಿವರಗಳೊಂದಿಗೆ) ;

(ಆ) ಅನ್ಯ ಸೇವೆಯಡಿ ಕೆಲಸ ನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಗಳು ಹೊರ ರಾಜ್ಯ ಮತ್ತು ಬೇರೆ ಇಲಾಖೆಗಳಿಂದ ಬಂದಿದ್ದು, ಇವರು

BMRCL ನ ಸಿಬ್ಬಂದಿಗೆ ತುಂಬಾ ಕಿರುಕುಳ, ಮಾನಸಿಕ ಹಿಂಸೆ ನೀಡುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) BMRCL ನಲ್ಲಿ 'ಸಿ' ವೃಂದದ ಹುದ್ದೆಗಳಿಗೆ ರಾಜ್ಯದವರನ್ನು ನೇಮಕ ಮಾಡಿ ಸಹಾಯಕ ವ್ಯವಸ್ಥಾಪಕರ ಹುದ್ದೆಯಿಂದ ಉನ್ನತ ಹುದ್ದೆಯವರೆಗೆ ಬೇರೆ ರಾಜ್ಯ ಮತ್ತು ಬೇರೆ ಇಲಾಖೆಯಿಂದ ಅನ್ಯ ಯೋಜನೆಯಡಿ ನೇಮಕ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸ್ಪಷ್ಟೀಕರಣ ನೀಡುವುದು) ;

(ಈ) ದಿನದ ಮೂರು ಪಾಳಿಗಳಲ್ಲಿಯೂ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಿಶೇಷ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುತ್ತದೆಯೇ ಇಲ್ಲದಿದ್ದಲ್ಲಿ ಕಾರಣ ತಿಳಿಸುವುದು ;

(ಉ) BMRCL ೨೦೧೦-೧೧ ಮತ್ತು ೨೦೧೨ ನೇ ಸಾಲಿನ ನೇಮಕಾತಿಯಲ್ಲಿ ನಿಲ್ದಾಣ ನಿಯಂತ್ರಕ/ರೈಲು ಚಾಲಕ (Station Controller/Train Operator) ಎಂಬ ಪದನಾಮದಲ್ಲಿ ನೇಮಕಾತಿ ಪ್ರಕ್ರಿಯೆ ನಡೆದಿದ್ದು ಸೆಪ್ಟೆಂಬರ್ ೪, ೨೦೧೪ರ BMRCL ಕಚೇರಿ ಆದೇಶ ಸಂಖ್ಯೆ: HR/೧೧೨/ ೨೦೧೪ರ ಅನ್ವಯ ನಿಲ್ದಾಣ ನಿಯಂತ್ರಕ/ರೈಲು ಚಾಲಕ (Station Controller/Train Operator) ಹುದ್ದೆಯ ಪದನಾಮವನ್ನು ರೈಲು ಚಾಲಕ (Train Operator) ಎಂದು ಬದಲಾಯಿಸಿರುವುದಕ್ಕೆ ಕಾರಣವೇನು ?



## ಪೊಲೀಸ್ ಇಲಾಖೆಯಲ್ಲಿ ಕರ್ತವ್ಯದ ನಿರ್ಲಕ್ಷ್ಯತೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೪ (೧೪೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ ಪ್ರವಾಸಿ ವೀಸಾದಡಿ ಬಂದ ೮ ಪಾಕಿಸ್ತಾನಿ ಜನರಲ್ಲಿ ೫ ಮಂದಿ ತಪ್ಪಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; (ವಿವರ ನೀಡುವುದು)

(ಆ) ಇದ್ದಲ್ಲಿ, ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ ;

(ಇ) ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿದ್ದು, ಸಾಕಷ್ಟು ದರೋಡೆ, ನಾಪತ್ತೆ ಹಾಗೂ ಕ್ರಿಮಿನಲ್ ಪ್ರಕರಣಗಳು ಆಗುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದೇ ಇರುವ ಬಗ್ಗೆ ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಕೂಡಲೇ ಇಲ್ಲಿ ಉನ್ನತ ಹುದ್ದೆಗಳಲ್ಲಿರುವ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು) ?

## ಪೊಲೀಸ್ ಇಲಾಖೆಯ ವೈಫಲ್ಯ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೫ (೧೫೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಡಹಗಲೇ ಬರ್ಬರ ಕೊಲೆ, ದರೋಡೆ ಹಾಗೂ ಅತ್ಯಾಚಾರ ಪ್ರಕರಣಗಳು ನಡೆಯುತ್ತಿದ್ದು, ಸಂಬಂಧಿಸಿದ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳದೇ

ನಿಷ್ಕಾಳಜಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಯಾರು ಹೊಣೆಗಾರರು (ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿ ಕಳೆದ ೨ ವರ್ಷದಿಂದ ಈ ರೀತಿ ಎಷ್ಟು ಪ್ರಕರಣಗಳು ನಡೆದಿವೆ; ಅದರಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ (ಪೊಲೀಸ್ ಠಾಣಾವಾರು ವಿವರ ನೀಡುವುದು) ;

(ಇ) ಆರೋಪಿಗಳನ್ನು ಬಂಧಿಸುವಲ್ಲಿ ವಿಳಂಬವಾದ ಬಗ್ಗೆ ನಿಷ್ಕಾಳಜಿ ಮಾಡಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) ?

## ಪೊಲೀಸ್ ಕಾನಸ್ಟೇಬಲ್‌ಗಳಿಗೆ ಟಿ.ಎ/ಡಿ.ಎ ನೀಡದಿರುವುದು.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೬ (೧೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚುನಾವಣೆ ಸಂದರ್ಭದಲ್ಲಿ ಕರ್ತವ್ಯಕ್ಕೆ ನೇಮಕ ಮಾಡುವ ಪೊಲೀಸರಿಗೆ ಇತರೆ ಇಲಾಖೆಯ “ಡಿ” ದರ್ಜೆಯ ನೌಕರರಿಗೆ ನೀಡುವಂತಹ ಟಿ.ಎ/ಡಿ.ಎ ನೀಡದಿರುವುದು ನಿಜವೇ (ವಿವರ ನೀಡುವುದು) ;

(ಆ) ಈಗಾಗಲೇ ಎಲ್ಲಾ ಇಲಾಖೆಯ ನೌಕರರಿಗೆ ನೀಡುವಂತೆ ಇವರಿಗೂ ನೀಡಲು ಸರ್ಕಾರ ಗಮನ ಹರಿಸುವುದೇ (ವಿವರ ನೀಡುವುದು) ?



## ಅನ್ಯ ಕರ್ತವ್ಯದ ಮೇಲೆ ಪೊಲೀಸ್ ಸಿಬ್ಬಂದಿ.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೭ (೧೫೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಬಹಳಷ್ಟು ಕಡೆಗಳಲ್ಲಿ ಪೊಲೀಸ್ ಇಲಾಖೆಯ ಅನ್ಯ ಕರ್ತವ್ಯದ ಮೇಲೆ ಕಾನಸ್ಟೇಬಲ್‌ಗಳು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿ ಎಷ್ಟು ಕಾನಸ್ಟೇಬಲ್‌ಗಳು ಓ.ಓ.ಡಿ. ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ; ನಿಯಮದ ಪ್ರಕಾರ ಎಷ್ಟು ಮಂದಿ ಕಾರ್ಯನಿರ್ವಹಿಸಬೇಕಿದೆ; ಓ.ಓ.ಡಿ. ಸೌಲಭ್ಯ ಪಡೆದುಕೊಂಡಿರುವ ಕಾನಸ್ಟೇಬಲ್‌ಗಳ ವಿವರ ನೀಡುವುದು; ಓ.ಓ.ಡಿ ಕಾರ್ಯ ನಿರ್ವಹಿಸುವ ವಿಷಯದಲ್ಲಿ ಅವ್ಯವಹಾರ ಆಗಿರುವುದೆಂದು ತಿಳಿದು ಬಂದಿದ್ದು ಇದು ನಿಜವೇ (ವಿವರ ನೀಡುವುದು) ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಹಂಚಿಕೆಯಾಗಿದ್ದರೂ ನಿವೇಶನ ನೀಡದಿರುವುದು.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೦೮ (೫೪೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರ್ಕಾವತಿ, ವಿಶ್ವೇಶ್ವರಯ್ಯ, ಬನಶಂಕರಿ ೬ನೇ ಹಂತ (೧೧ ಬ್ಲಾಕುಗಳು) ಅಂಜನಾಪುರ ಈ ಬಡಾವಣೆಗಳಲ್ಲಿ ಪ್ರಾಧಿಕಾರದಿಂದ

ನಿವೇಶನ ಹಂಚಿಕೆಯಾಗಿರುವ ಹಂಚಿಕೆದಾರರಿಗೆ ನಿವೇಶನಗಳನ್ನು ಯಾವ ಯಾವ ಕಾರಣಕ್ಕಾಗಿ ನೀಡಿರುವುದಿಲ್ಲ ; ನಿವೇಶನ ನೀಡದೇ ಇರುವವರ ಹೆಸರು, ವಿಳಾಸ ಹಂಚಿಕೆಯಾದ ನಿವೇಶನದ ವಿವರ ನಿವೇಶನ ನೀಡದಿರುವುದಕ್ಕೆ ಕಾರಣ ಸಮೇತ ವಿವರ ಒದಗಿಸುವುದು ;

(ಆ) ಈವರೆವಿಗೆ ಬದಲಿ ನಿವೇಶನ ನೀಡಿರುವವರ ನಿವೇಶನದ ವಿವರ, ನಿವೇಶನ ಪಡೆದವರ ಹೆಸರು ಮತ್ತು ವಿಳಾಸ ಒದಗಿಸುವುದು ;

(ಇ) ಬ್ಲಾಕ್‌ವಾರು ಕಾರ್ಯಪಾಲಕ ಅಭಿಯಂತರವರಿಂದ ನೀಡುವ ಸಿ.ಡಿ.ಗಾಗಿ ಬಂದಿರುವ ಅರ್ಜಿಗಳೆಷ್ಟು ; ನೀಡಿರುವ ಅರ್ಜಿಗಳೆಷ್ಟು; ನೀಡದಿರುವ ಅರ್ಜಿಗಳೆಷ್ಟು (ಬ್ಲಾಕ್ ವಾರು ಹೆಸರು ಸಮೇತ ವಿವರ ಒದಗಿಸುವುದು) ?

## ಮಳೆಗಾಲದಲ್ಲಿ ಚರಂಡಿ ನೀರು ಮನೆಗಳಿಗೆ ಸಮಸ್ಯೆ ಸೃಷ್ಟಿ.

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೯೯ (೩೯೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಯಶವಂತಪುರ, ಬಿ.ಕೆ.ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆಗಾಲದ ಸಮಯದಲ್ಲಿ ಚರಂಡಿ ತುಂಬಿ, ಅದೇ ನೀರು ಮನೆಗಳಿಗೆ ನುಗ್ಗುತ್ತಿರುವುದರಿಂದ ಸ್ಥಳೀಯ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;



(ಆ) ಬಂದಿದ್ದಲ್ಲಿ, ಶಾಶ್ವತ ಪರಿಹಾರ ಅಥವಾ ತಡೆಗೋಡೆ ನಿರ್ಮಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಅದನ್ನು ಯಾವಾಗ ಕಾರ್ಯಾರೂಪಕ್ಕೆ ತರಲಾಗುವುದು ?

## ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ.

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೦ (೪೮೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಲ್ಲದೆ, ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಕಿರುಕುಳಗಳು ನಡೆಯುತ್ತಿರುವ ಬಗ್ಗೆ ಸರ್ಕಾರವು ಗಮನಹರಿಸಿದೆಯೇ ;

(ಇ) ಹಾಗಿದ್ದಲ್ಲಿ, ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಮಕ್ಕಳ ಮೇಲೆ ಲೈಂಗಿಕ ಕಿರುಕುಳಗಳು ನಡೆದ ಪ್ರಕರಣಗಳೆಷ್ಟು ;

(ಈ) ಇವುಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ತಿರುಪತಿ–ತಿರುಮಲದಲ್ಲಿರುವ ಆಸ್ತಿ ವಿವರ.

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೧ (೪೮೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಂಧ್ರ ಪ್ರದೇಶದ ತಿರುಪತಿ–ತಿರುಮಲದಲ್ಲಿ ಕರ್ನಾಟಕಕ್ಕೆ ಸೇರಿದ ಆಸ್ತಿ ವಿವರಗಳನ್ನು ನೀಡುವುದು ;

(ಆ) ಸದರಿ ಆಸ್ತಿಯನ್ನು ಯಾರಿಗೆ ನೀಡಿದೆ (ಪೂರ್ಣ ಮಾಹಿತಿಯನ್ನು ನೀಡುವುದು) ?

## ರಸ್ತೆ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸುವುದು.

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ):–**

೪೧೨ (೫೪೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣರಾಜೇಂದ್ರ ಮಾರುಕಟ್ಟೆಯಿಂದ ಮೈಸೂರು ಬ್ಯಾಂಕ್‌ಗೆ ಹೋಗುವ ಅವೆನ್ಯೂ ರಸ್ತೆಯ ಎರಡೂ ಕಡೆ ರಸ್ತೆ ಬದಿಯ ವ್ಯಾಪಾರಿಗಳು ಪಾದಚಾರಿಗಳ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ಸಾರ್ವಜನಿಕರು ಈ ರಸ್ತೆಯಲ್ಲಿ ಓಡಾಡಲು ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಸ್ತೆ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಿ ಸಾರ್ವಜನಿಕರು ಈ ರಸ್ತೆಯಲ್ಲಿ ಸರಾಗವಾಗಿ ಓಡಾಡಲು ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗುವುದು ?



## ಕಾರಾಗೃಹದಲ್ಲಿ ಕಾನೂನುಬಾಹಿರ ಚಟುವಟಿಕೆಗಳು.

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ):–**

೪೧೩ (೫೪೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಾರಾಗೃಹಗಳಲ್ಲಿ ಸಿಬ್ಬಂದಿಯು ಖೈದಿಗಳಿಗೆ ಮೊಬೈಲ್, ಮದ್ಯ ಲಹಾಗೂ ಇನ್ನಿತರ ವಸ್ತುಗಳನ್ನು ಸರಬರಾಜು ಮಾಡುವಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದುವರೆವಿಗೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಎಷ್ಟು ಜನ ಸಿಬ್ಬಂದಿಯ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ;

(ಇ) ಕಾರಾಗೃಹಗಳಲ್ಲಿನ ಸಿಬ್ಬಂದಿಯು ನಡೆಸುತ್ತಿರುವ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ಮಹಿಳೆಯರ ಮೇಲೆ ನಡೆದಿರುವ ದೌರ್ಜನ್ಯಗಳು.

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ):–**

೪೧೪ (೫೪೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೨ರಿಂದ ಈವರೆವಿಗೆ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದ ಪ್ರಕರಣಗಳೆಷ್ಟು ;

(ಆ) ಮಹಿಳೆಯರ ಸುರಕ್ಷತೆ ಬಗ್ಗೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ನೀಡಿರುವ ನಿರ್ದೇಶನಗಳನ್ನು ಜಾರಿಗೊಳಿಸುವ ಬಗ್ಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

**ಪಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59/ಕಾ.ಸೂ. 0 3459/ 1500 ಪ್ರತಿಗಳು/8–12–14